ಜನಪದ ವಿಚಾರ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೯ ಡಿಸೆಂಬರ್-೨೦೦೮ ಸಂಚಿಕೆ-೫



ಆ ಚಂದ್ರಯಾನ ಈ ಭೂಲೋಕ

ಜನಪದ ವಿಚಾರದಲ್ಲಿ

ಡಿಸೆಂಬರ್–೨೦೦೮

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಡಿಸೆಂಬರ್ - ೨೦೦೮

ಸಂಪುಟ - ೯

ಸಂಚಿಕೆ - ೫

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-571431, ಜಿಲ್ಲಾ ಮಂಡ್ಯ

✆ 08236 316344

janapada@yahoo.com

www.janapada.net

ಪ್ರಾರ್ಥನೆ

ನಾನು ಯಾವ ನೆಲದಲ್ಲಾದರೂ ನಡೆದಾಡಲಿ
ನನ್ನ ದೇಶದ ಮಣ್ಣ ವಾಸನೆಯೇ ಸೂಸಿ
ಬರುತಿರಲಿ
ನಾನು ಕಾಶ್ಮೀರದ ಕಣಿವೆಯ ಸುವಾಸನೆ
ಮೂಸಿರುವೆನು
ದ್ವೇಷದ ವಿಷಗಾಳಿ ವರ್ಜವಾಗಿದೆ ನನಗೆ
ಸ್ಫೋಟಕ ಮದ್ದಿನ ಘಮಟು ವಾಸನೆ ಒಗ್ಗಲಾರದು
ನನಗೆ ಹಿಮಚ್ಛಾದಿತ ಹಿಮಾಲಯವೇ ಅಚ್ಚುಮೆಚ್ಚು
ಆದರೂ ಅವರೇಕೆ ಹೇಳುತ್ತಿದ್ದಾರೆ
ನನಗೆ ರಾಸ ಪರ್ವತ ಪ್ರೀತಿಯೆಂದು?

ನಾನು ಹಜ್ ಯಾತ್ರೆ ಕೈಗೊಂಡರೂ
ಮದೀನಾದ ನೆಲದಲ್ಲಿ ಪ್ರಾರ್ಥಿಸಿದರೂ
ಭಾರತದ ಏಳ್ಗೆಗಾಗಿಯೇ ಪ್ರಾರ್ಥಿಸುತ್ತೇನೆ
ನನ್ನ ದೇಶದ ಸುಖ ಸಮೃದ್ಧಿ ಬಯಸುತ್ತೇನೆ
ನನಗೆ ಆಡಲು ಮಡಿಲು
ನೀರು, ಆಹಾರ, ಗಾಳಿ ನೀಡಿದ
ಮಾತೃಭೂಮಿಯ ಶ್ರೇಯಸ್ಸು ಬಯಸುವೆ
ನನ್ನ ದೇಹದ ಹನಿ ಹನಿ ರಕ್ತದಲ್ಲೂ
ಭಾರತದ ಹೆಸರೇ ಪ್ರತಿಧ್ವನಿಸುತ್ತದೆ
ಆದರೂ ಅವರೇಕೆ ಹೇಳುತ್ತಿದ್ದಾರೆ
ನೀನು ಗಡಿಯಾಚೆಯವಳೆಂದು?

⊙ *ಕೆ. ಪರೀಘಾ*

(ಸಾಭಾರ : ಸಂವಾದ)

ವಿಚಾರ ದೀಪ್ತಿ

ಅಸಹಕಾರ

ಅಸಹಕಾರ ಎಂಬ ಅಸ್ತ್ರದ ಮಹಿಮೆಯನ್ನು ಗಾಂಧಿಯವರಂತೆ ಲೋಕಕ್ಕೆ ಕಾಣಿಸಿಕೊಟ್ಟವರು ಈ ಶತಮಾದಲ್ಲಿ ಇನ್ನೊಬ್ಬರಿಲ್ಲ. ಧರ್ಮ ಎಷ್ಟು ಸನಾತನವಾದದ್ದೋ ಅಸಹಕಾರವೂ ಅಷ್ಟೇ ಸನಾತನವಾದದ್ದು.

ಕೆಟ್ಟದರ ಜೊತೆಗೆ ಅಸಹಕಾರ, ಒಳ್ಳೆಯದರ ಜೊತೆಗೆ ಸಹಕಾರ ಇದು ಪ್ರತಿಮನುಷ್ಯನಿಗೂ ಕರ್ತವ್ಯಕರ್ಮ ಎಂದರು ಗಾಂಧೀಜಿ. ಗಾಂಧೀಜಿಯವರ ಪ್ರಕಾರ, ಅ–ಸಹಕಾರ ಎಂದರೆ 'ಸಹಕಾರಮಾಡದೆ ಇರುವುದು' ಎಂಬ ನಿಷ್ಕ್ರಿಯೆ ಮಾತ್ರವಲ್ಲ; ಅದು 'ಕೆಟ್ಟದ್ದಕ್ಕೆ ವಿರುದ್ಧವಾಗಿ ಹೋರಾಡುವುದು' ಎಂಬ ಕ್ರಿಯಾತ್ಮಕವಾದದ್ದು. ಆದರೆ, ಈ ರೀತಿಯಾದ ಅಸಹಕಾರ, ಕ್ರಿಯಾತ್ಮಕವಾದ ಹೋರಾಟ ಅಹಿಂಸಾಯುತವಾಗಿರತಕ್ಕದ್ದು; ದ್ವೇಷ,ಅಸೂಯೆ, ಪ್ರತೀಕಾರಬುದ್ಧಿಗಳಿಂದ ದೂರವಾಗಿರತಕ್ಕದ್ದು.

ಅಸಹಕಾರದ ಈ ಅಂತರಾತರ್ಥವನ್ನು ತಿಳಿದು, ಅಹಿಂಸೆಯಿಂದ ಅದನ್ನು ಆಚರಿಸಿದರೆ ಸಾಮಾನ್ಯಜನರಿಗೆ ಆತ್ಮಗೌರವ ವೃದ್ಧಿಯಾಗುತ್ತದೆ, ಅವರ ಸಾಮರ್ಥ್ಯ ಹೆಚ್ಚುತ್ತದೆ ಎಂದು ಗಾಂಧೀಜಿ ತೋರಿಸಿಕೊಟ್ಟರು. ತಮ್ಮತಮ್ಮೊಳಗಿರುವ ಆತ್ಮಶಕ್ತಿಯನ್ನು ಅರಿತುಕೊಂಡರೆ, ಯಾರೂ ಪಾಪವೀಶಕ್ತಿಗಳಿಗೆ ಅಂಜಬೇಕಾದ್ದಿಲ್ಲ ಎಂಬುದನ್ನು ತಮ್ಮ ಬದುಕಿನಲ್ಲಿ ತೋರಿ,ಇತರರ ಅನುಭವಕ್ಕೂ ತೋರಿಸಿಕೊಟ್ಟರು.

ಗಾಂಧೀಯವರು ಹೇಳುವಂತೆ ಬೆಳಕಿನ ಶಕ್ತಿಗಳಿಗೂ ಕತ್ತಲೆಯ ಶಕ್ತಿಗಳಿಗೂ ನಡೆದ ಅಸಹಕಾರದ ಹೋರಾಟವನ್ನು ಕೃಷ್ಣಾರ್ಜುನಸಂವಾದರೂಪದಲ್ಲಿ ಚಿತ್ರಿಸಿರುವುದೇ ಭಗವದ್ಗೀತೆ. ಸಂತರಾದವರು ಅಸಂತರನ್ನು ದೂರವಿರಿಸಬೇಕೆಂದು ತುಲಸಿದಾಸರು ಹೇಳಿರುವುದು ಈ ಅರ್ಥದಲ್ಲಿಯೇ. ಪಾರಸಿಗಳ ಜೇಂಡ್‌ಅವಸ್ತೆ, ಬೆಳಕಿನ ಅಧಿದೈವವಾದ ಅಹೂರಮಸ್ಥನಿಗೂ ಕತ್ತಲೆಯ ಅಧಿದೈವವಾದ ಅಹ್ರಿಮಾನನಿಗೂ ನಿರಂತರವಾಗಿ ನಡೆಯುವ ಅಸಹಕಾರದ ಕಾಳಗವನ್ನು ವರ್ಣಿಸುತ್ತದೆ. ಯೇಸುಸ್ವಾಮಿ ಆ ಕಾಲದ ಫರಿಸಾಯರೊಡನೆ ಅಸಹಕಾರವನ್ನು ಅಹಿಂಸಾಯುಕ್ತವಾಗಿ ನಡೆಸಿ, ಅಮೃತನಾದ. ಮಹಮ್ಮದ್ ಗುರು ಆಜೀವಪರ್ಯಂತ ತಾನು ಮಾಡಿದ್ದೂ ಇದನ್ನೇ. ಮಹಮ್ಮದರ ಮೊಮ್ಮಗನಾದ ಹುಸೇನ್ ಕರ್ಬಲಾದಲ್ಲಿ ಅಸಹಕಾರದ ಅಸ್ತ್ರವನ್ನು ಹಿಡಿದು ಹೋರಾಡಿ ಅಮರರಾದರು, ಪ್ರಹ್ಲಾದ ತನ್ನ ತಂದೆಯೊಡನೆ ಅಸಹಕಾರ ಮಾಡಿದ. ಮೀರಾಬಾಯಿ ತನ್ನ ಪತಿಯೊಡನೆ, ವಿಭೀಷಣ ತನ್ನ ಅಣ್ಣನೊಡನೆ ಅಸಹಕಾರ ಮಾಡಿದರು.

ಅಸಹಕಾರ, ಅರಿತವರ ಕೈಯಲ್ಲಿ, ಒಂದು ಅಮೋಘವಾದ ಆಯುಧ.

⊙ ***ಜಿ.ಪಿ.ರಾಜರತ್ನಂ***

(ರಾಜರತ್ನಂ ಅವರ ಜನ್ಮದಿನದ ಸ್ಮರಣೆಯಲ್ಲಿ : ಸಾಭಾರ : ವಿಚಾರ ರಶ್ಮಿ)

ಆ ಚಂದ್ರಯಾನ, ಈ ಭೂಲೋಕ

⊙ *ಸುರೇಂದ್ರ ಕೌಲಗಿ*

ದುರ್ದೈವವೆಂದರೆ ನಮ್ಮ ದೇಶದಲ್ಲಿ ಯಾವುದು ಶ್ರೇಷ್ಠ, ಯಾವುದು ಅಲ್ಲ ಅನ್ನುವ ನಿರ್ಧಾರ ಕೆಲ ಅಪಾತ್ರರ ಕೈಯಲ್ಲಿದೆ. – **ಶ್ರೀ ಕೃಷ್ಣ ಆಲನಹಳ್ಳಿ**

ಹೇಗಾದರೂ ಪ್ರಸ್ತುತದಲ್ಲಿ ಸಲ್ಲಬೇಕೆಂಬ ಹುನ್ನಾರದಲ್ಲಿಯೇ ನಮ್ಮ ವೈಚಾರಿಕ ಆಕೃತಿ ರೂಪಗೊಳ್ಳುತ್ತಿದೆ. ಅದನ್ನು ಮೀರದೆ ನಿಜವಾದ ಸೃಷ್ಟಿ ಸಾಧ್ಯವಿಲ್ಲ. – **ಯು.ಆರ್. ಅನಂತಮೂರ್ತಿ**

ಕಳೆದ ಅಕ್ಟೋಬರ್ ೨೨ರಂದು ಭಾರತವು ಚಂದ್ರಯಾನ-೧ ಎಂಬ ಯೋಜನೆಯ ಅಂಗವಾಗಿ ನಾಲ್ಕು ಲಕ್ಷ ಕಿ.ಮೀ. ದೂರದ ಚಂದ್ರನತ್ತ ಹನ್ನೊಂದು ವೈಜ್ಞಾನಿಕ ಉಪಕರಣಗಳನ್ನು ಕಳುಹಿಸಿತು. ಭಾರತೀಯರು ಮಾತ್ರವಲ್ಲ ಜಗತ್ತಿನ ಎಲ್ಲ ದೇಶಗಳ ನಾಯಕರು, ವಿಜ್ಞಾನಿಗಳು ಭಾರತದ ಈ ಸಾಧನೆಯನ್ನು ಬಹಳವಾಗಿ ಮೆಚ್ಚಿದರು. ಈ ಸಾಧನೆಗೈದ ವಿಜ್ಞಾನಿಗಳನ್ನು ಅಭಿನಂದಿಸಿದರು. ಈಗಾಗಲೆ ಇಂಥ ಸಾಧನೆ ಮಾಡಿರುವ ಚೀನಾ, ಅಮೇರಿಕಾ, ಬ್ರಿಟನ್, ರಷ್ಯಾ, ಮತ್ತು ಜಪಾನ್ ದೇಶಗಳ ಪಟ್ಟಿಯೊಂದಿಗೆ ಭಾರತವೂ ಸೇರಿತು.

ಯಾವ ರೀತಿ ೨೦೦೧ ಸೆಪ್ಟಂಬರ್ ೧೧ರಂದು ಭಯೋತ್ಪಾದಕರು ವಿಶ್ವ ವಾಣಿಜ್ಯ ಸಂಸ್ಥೆಯ ಮೇಲೆ ದಾಳಿ ಮಾಡಿ ಜಗತ್ತಿನಾದ್ಯಂತ ಭಯೋತ್ಪಾದಕತೆಯ ಒಂದು ಯುಗವನ್ನೇ ಪ್ರಾರಂಭಿಸಿದರೋ ಅದೇ ರೀತಿ ೨೦೦೮ರ ಅಕ್ಟೋಬರ್ ೨೨ರ ಚಂದ್ರಯಾನ-೧ ಭೂಲೋಕದ ಪರಿಸರದ ಮೇಲೆ ಎಲ್ಲೆಡೆಯಿಂದಲೂ, ಎಲ್ಲ ವಿಧವಾಗಿಯೂ ಆಗುತ್ತಿರುವ ಪರಿಸರದ ಮೇಲಿನ ದಾಳಿಗೆ ಹೊಸ ತೀವ್ರತೆ ತಂದುಕೊಟ್ಟಿತು. ಈಗಾಗಲೆ ಪರಿಸರ ವಿನಾಶ ಕೃತ್ಯಗಳು ಪ್ರಶ್ನಾತೀತವಾಗಿವೆ. ಈಗ ಚಂದ್ರಯಾನ-೧ ಆ ವಿನಾಶ ಕೃತ್ಯಗಳು ಮಾನವ ಜನ್ಮದ ಹಕ್ಕು ಎಂಬ ಹಂತಕ್ಕೆ ತಂದು ನಿಲ್ಲಿಸಿದೆ.

ಪ್ರತಿಯೊಂದು ಅಂತರಿಕ್ಷ ಪ್ರಯೋಗ ಅದು ಯಾವುದೇ ದೇಶದಿಂದ ನಡೆದಿರಲಿ ಆ ಪ್ರಯೋಗಗಳಿಂದ ಆಗುವ ಭೌತಿಕ ಲಾಭಗಳನ್ನು, ವೈಜ್ಞಾನಿಕ ಲಾಭಗಳನ್ನು ಮಾತ್ರ ಜನತೆಯ ಮುಂದೆ ಇಡಲಾಗುತ್ತದೆಯೇ ವಿನಃ ಆ ಪ್ರತಿಯೊಂದು ಪ್ರಯೋಗದಿಂದ ಪರಿಸರದ ಮೇಲೆ ಉಂಟಾಗುವ ದುಷ್ಪರಿಣಾಮಗಳ ವಿವರಗಳನ್ನು ಮಾತ್ರ ತಿಳಿಸುವುದಿಲ್ಲ. ಅಂತರಿಕ್ಷಕ್ಕೆ ಹಾರಿಬಿಡಲಾಗುವ ಕಾಯದ ಉಡಾವಣಾ ವಾಹನದಿಂದ ಬಹು ದೊಡ್ಡ ಪ್ರಮಾಣದಲ್ಲಿ ಬೆಂಕಿ ಹೊರಬೀಳುತ್ತದೆ, ಶಬ್ದವೂ ಉಂಟಾಗುತ್ತದೆ. ಈ ಬೆಂಕಿ, ಹೊಗೆ ಮತ್ತು ಶಬ್ದ ಭೂಮಿಯ ಮೇಲಿನ ಮುಖ್ಯ ಓಝೋನ್ ಪದರದ ವರೆಗೂ ಮತ್ತು ಆನಂತರವೂ ದಾಟಿ ಹೋಗುತ್ತದೆ. ಚಂದ್ರಯಾನ-೧ ನೌಕೆ ೧೮ ದಿನಗಳ ಕಾಲ ಅಂತರಿಕ್ಷದಲ್ಲಿ ಯಾನ ಮಾಡಿದೆ. ಇದರಿಂದ ಭೂಮಿಯ ಮೇಲೆ ಆಗುವ ವೈಪರಿತ್ಯಗಳ

ವಿವರ ಸಿಗುವುದಿಲ್ಲ. ಅಲ್ಲದೆ, ಅಂತರಿಕ್ಷ ಕಾಯದ ಉಡಾವಣಾ ವೇಳೆಯಲ್ಲಿ ಸುಮಾರು ೬ ಕಿ.ಮೀ ಸುತ್ತಮುತ್ತಲಿನ ಪ್ರದೇಶವನ್ನು ನಿರ್ಜನಗೊಳಿಸಲಾಗುತ್ತದೆ. ಏಕೆಂದರೆ ಉಡಾವಣಾ ಕಾರಣದಿಂದ ಉಂಟಾಗುವ ಭಾರಿ ಶಬ್ದ ಮತ್ತು ಬೆಂಕಿಯಿಂದ ಪ್ರಾಣಾಪಾಯವಾಗುವ ಸಾಧ್ಯತೆ ಇರುತ್ತದೆ. ಚಂದ್ರಯಾನಗಳು ಸರ್ವೇ ಸಾಮಾನ್ಯವಾಗುವ ದಿನಗಳು ದೂರವಿಲ್ಲ. ಚಂದ್ರಯಾನಗಳು, ಅಂತರಿಕ್ಷದಲ್ಲಿಯ ಹಾರಾಟಗಳು, ಕೃತಕ ಉಪಗ್ರಹಗಳ ಹಾರಿಸುವಿಕೆ, ಅವುಗಳೊಂದಿಗೆ ಇರಿಸಿಕೊಳ್ಳಲಾಗುವ ರೇಡಿಯೋ ಸಂಕೇತ ಮುಂತಾದ ಅನೇಕ ವೈಜ್ಞಾನಿಕ ಚಟುವಟಿಕೆಗಳು ಭೂಮಂಡಲದ ಮೇಲೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಅನೇಕ ದುಷ್ಪರಿಣಾಮಗಳನ್ನು ಉಂಟು ಮಾಡುವುದರಲ್ಲಿ ಸಂದೇಹವಿಲ್ಲ. ಆದರೆ ಅಂತರಿಕ್ಷದಲ್ಲಿ ಮಾಡಲಾಗುವ ಅನೇಕ ಪ್ರಯೋಗಗಳ ದುಷ್ಪರಿಣಾಮಗಳ ಬಗ್ಗೆ ವಿಜ್ಞಾನಿಗಳು ಏಕೆ ವೈಜ್ಞಾನಿಕವಾಗಿ ಅಧ್ಯಯನ ಮಾಡುತ್ತಿಲ್ಲ? ರಾಜಕಾರಣಿಗಳು ಇಂಥ ಆಧ್ಯಯನ ನಡೆಸುವಂತೆ ಏಕೆ ಕ್ರಮಕೈಗೊಳ್ಳುತ್ತಿಲ್ಲ? ವಿಶ್ವವಿದ್ಯಾನಿಲಯಗಳು ಈ ಕ್ಷೇತ್ರದಲ್ಲಿ ಸಂಶೋಧನೆ ಏಕೆ ಮಾಡುತ್ತಿಲ್ಲ? ಇದೆಲ್ಲವೂ ನಿಗೂಢವಾಗಿಯೇ ಇದೆ. ಭಾರತದ ಮಟ್ಟಿಗೆ ಇಸ್ರೊ ಅಂತರಿಕ್ಷ ವಿಷಯದ ಪ್ರಯತ್ನಗಳಿಗಾಗಿರುವ ಸಂಸ್ಥೆ. ಈ ಸಂಸ್ಥೆಯಲ್ಲಿ ಸಾವಿರಾರು ವಿಜ್ಞಾನಿಗಳು, ತಂತ್ರಜ್ಞರು ಮತ್ತು ಕುಶಲ ಕರ್ಮಿಗಳು ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರ ಜೀವನ ನಿರ್ವಹಣೆ ಅಂತರಿಕ್ಷ ಪ್ರಯೋಗಗಳ ಮೇಲೆ ಅವಲಂಬಿಸಿದೆ. ಆದ್ದರಿಂದ ಅವರಿಗೆ ಭೂಲೋಕದ ಸಮಸ್ಯೆಗಳ ಪರಿಹಾರದ ಯೋಚನೆಗಿಂತ ತಮ್ಮ ಇಸ್ರೋ ಸಂಸ್ಥೆಯನ್ನು ಹೇಗೆ ಜೀವಂತವಾಗಿರಿಸಿಕೊಳ್ಳಬಹುದೆಂಬ ಯೋಚನೆಯೇ ಮುಖ್ಯವಾಗಿದೆ. ಅವರು ಕೇಂದ್ರ ಸರ್ಕಾರಕ್ಕೆ ಒಂದಾದ ಮೇಲೆ ಒಂದು ಅಂತರಿಕ್ಷದಲ್ಲಿಯ ಪ್ರಯೋಗಗಳ ಯೋಜನೆಯನ್ನು ಕೊಡುತ್ತಲೇ ಹೋಗುತ್ತಾರೆ. ಈಗ ಚಂದ್ರಯಾನ-೧, ನಂತರ ಚಂದ್ರಯಾನ-೨, ನಂತರ ಚಂದ್ರನ ಮೇಲೆ ಇಳಿಯುವುದು, ನಂತರ ಮಂಗಳಗ್ರಹದತ್ತ ನೆಗೆತ, ನಂತರ ಶನಿಗ್ರಹದತ್ತ ಹೀಗೆ ಸಾಗುತ್ತದೆ ಕೊನೆ ಮೊದಲಿಲ್ಲದ ಅಂತರಿಕ್ಷ ಸಾಧನೆಗಳು. ಇಂಥದೇ ಪ್ರಯೊಗಗಳನ್ನು ಜಗತ್ತಿನ ಎಲ್ಲ ಬಲಾಢ್ಯ ದೇಶಗಳೂ ನಡೆಸುತ್ತಿವೆ. ಈ ಎಲ್ಲ ಪ್ರಯೋಗಗಳಿಂದ ಭೂಲೋಕದ ಪರಿಸರದ ಮೇಲೆ ಎಷ್ಟು ಅಗಾಧ ಪ್ರಮಾಣದ ದುಷ್ಪರಿಣಾಮ ಉಂಟಾಗುತ್ತದೆ ಎಂಬುದರ ವಿವರ ಎಲ್ಲಿದೆ? ವಿಶ್ವ ರಾಷ್ಟ್ರ ಸಂಸ್ಥೆಯಿಂದಾಗಲೀ, ಅರ್ಥ ಸಮ್ಮಿಟ್‌ನಂಥ ಸಂಘಟನೆಯಿಂದಾಗಲೀ ಕೂಡ ವಿವರಗಳು ಏಕೆ ಬಂದಿಲ್ಲ? ಇದು ಅರ್ಥವಾಗದ ಸಂಗತಿ. ಇದರ ಅರ್ಥ ಚಂದ್ರಯಾನದಂಥ ಅಂತರಿಕ್ಷ ಪ್ರಯೋಗಗಳು ಮಾನವಕುಲದ ಹಿತಕ್ಕೆ ಅಗತ್ಯವೆಂದೆ?

ಭಾರತದ ಚಂದ್ರಯಾನ-೧ರ ಸಾಹಸಕ್ಕಾಗಿ ೩೮೩ ಕೋಟಿ ರೂಪಾಯಿಗಳು ಖರ್ಚಾಗಿವೆ. ಈ ಮೊತ್ತ ಬಹು ದೊಡ್ಡದೆಂಬ ದೂರು ಬಂದಾಗ ಇಸ್ರೋದ ವಕ್ತಾರರೊಬ್ಬರು ಈ ಮೊತ್ತ ಇಸ್ರೋ ಆಯವ್ಯಯದ ಶೇಕಡಾ ೧೦ರಷ್ಟು ಮಾತ್ರ ಎಂದು ಹೇಳಿ ವಿಷಯದ ಗಂಭೀರತೆಯನ್ನು ಮರೆಮಾಚಿದ್ದಾರೆ. ಚಂದ್ರಯಾನಕ್ಕಾಗಿ ೩೮೬ ಕೋಟಿ ರೂಪಾಯಿ ನೀರಿನಂತೆ ಖರ್ಚಾಗುತ್ತಿರುವ ವೇಳೆಯಲ್ಲಿ ಭೂಲೋಕದಲ್ಲಿ

ಅರ್ಥವ್ಯವಸ್ಥೆ ಕುಸಿಯುತ್ತಿತ್ತು. ಪ್ರತಿದಿನದ ಅಗತ್ಯ ಆಹಾರ ವಸ್ತುಗಳ ಬೆಲೆ ಗಗನಕ್ಕೆ ಹಾರುತ್ತಿತ್ತು. ಅಕ್ಕಿಯ ಬೆಲೆ ಕೆ.ಜಿ. ಒಂದಕ್ಕೆ ೫೦ ರೂಗಳಿಗೂ ಹೆಚ್ಚು; ಎಣ್ಣೆಯ ಬೆಲೆ ೧೦೦ ರೂ. ಹೀಗೆ ಪ್ರತಿಯೊಂದು ಜೀವನಾವಶ್ಯಕ ವಸ್ತುವಿನ ಬೆಲೆ ಏರುತ್ತಲೇ ಇತ್ತು. ವಾಣಿಜ್ಯ ಬ್ಯಾಂಕುಗಳು ದಿವಾಳಿ ಏಳುತ್ತಿದ್ದವು. ಕೈಗಾರಿಕೆಗಳು ಸ್ಥಗಿತಗೊಳ್ಳುತ್ತಿದ್ದವು, ಉದ್ಯೋಗಾವಕಾಶಗಳು ಸಂಕುಚಿತಗೊಳ್ಳುತ್ತಿದ್ದವು. ಭ್ರಷ್ಟಾಚಾರ ಯಾವ ತಾರತಮ್ಯವೂ ಇಲ್ಲದೆ ಎಲ್ಲರನ್ನೂ ಕಿತ್ತು ತಿನ್ನುತ್ತಿತ್ತು. ರಾಜಕೀಯ ಅಸ್ಥಿರತೆ ದೇಶವನ್ನು ಕಾಡುತ್ತಿತ್ತು; ಭಯೋತ್ಪಾದಕರ ಅಟ್ಟಹಾಸ ನಡೆಯುತ್ತಿತ್ತು. ಇಂಥ ಭೀಕರ ಸಾಮಾಜಿಕ, ಆರ್ಥಿಕ, ರಾಜಕೀಯ ಸಂಕಟದಲ್ಲಿ ಭೂಲೋಕ ಇದ್ದಾಗ ಅತ್ತ ಚಂದ್ರಯಾನ-೧ರ ಭರದ ಸಿದ್ಧತೆ ನಡೆಯುತ್ತಿತ್ತು.

ಈ ವಿಪರ್ಯಾಸದ ಬಗ್ಗೆ ದೇಶದ ನಾಯಕರಿಗಾಗಲೀ, ವಿಜ್ಞಾನಿಗಳಿಗಾಗಲೀ, ಅರ್ಥಶಾಸ್ತ್ರಜ್ಞರಿಗಾಗಲೀ ಕಿಂಚಿತ್ತೂ ಚಿಂತೆ ಇರುವಂತೆ ಕಾಣಲಿಲ್ಲ.

ಈ ಭೂಲೋಕದ ಮೇಲಿರುವ ಸಮಸ್ಯೆಗಳಿಗೂ ಆ ಚಂದ್ರಯಾನದ ಉದ್ದೇಶ್ಯಕ್ಕೂ ಯಾವುದೇ ಸಂಬಂಧವಿಲ್ಲ. ಭೂಲೋಕದ ಮೇಲಿರುವ ಸಮಸ್ಯೆಗಳು ನೂರಕ್ಕೆ ನೂರು ಮಾನವೀಯವಾದವು. ಆದರೆ ಚಂದ್ರಯಾನದ ಉದ್ದೇಶ್ಯ ಕೇವಲ ವೈಜ್ಞಾನಿಕ ಕುತೂಹಲದ ಸಮಾಧಾನಕ್ಕಾಗಿ. ಚಂದ್ರಯಾನದ ಉದ್ದೇಶ್ಯಗಳು ಇಂತಿವೆ :- ೧. ಚಂದ್ರನ ಪರಿಸರವನ್ನು ಅಧ್ಯಯನ ಮಾಡುವುದು; ೨. ಸಂಪೂರ್ಣ ಚಂದ್ರನನ್ನು ದೃಶ್ಯದಲ್ಲಿ ಸೆರೆಹಿಡಿಯುವುದು; ೩. ಚಂದ್ರನಲ್ಲಿರುವ ಬೆಟ್ಟಗುಡ್ಡಗಳನ್ನು ಕುರಿತು ಸಮಗ್ರ ಅಧ್ಯಯನ ಮಾಡುವುದು; ೪. ಚಂದ್ರನಲ್ಲಿ ನೀರಿನಾಂಶ ಇದೆಯೇ, ಇಲ್ಲವೇ ಎಂಬುದನ್ನು ಪತ್ತೆಮಾಡುವುದು; ೫. ಚಂದ್ರನ ಗುರುತ್ವಾಕರ್ಷಣ ಶಕ್ತಿಯನ್ನು ಅಳೆಯುವುದು.

ಚಂದ್ರಯಾನದ ಮೇಲ್ಕಾಣಿಸಿದ ಉದ್ದೇಶ್ಯಗಳನ್ನು ಭೂಲೋಕದ ಅಧ್ಯಯನಕ್ಕಾಗಿಯೇ ಉಪಯೋಗಿಸಿಕೊಳ್ಳಬಹುದಾಗಿತ್ತಲ್ಲ. ಭೂಲೋಕದ ಪರಿಸರವನ್ನು ಹಾಳುಗೆಡವಿ ಆ ಚಂದ್ರಲೋಕದ ಪರಿಸರದ ಅಧ್ಯಯನ ಮಾಡುವುದರಲ್ಲಿ ಯಾವ ಪುರುಷಾರ್ಥವಿದೆ? ಇಲ್ಲಿಯ ಬೆಟ್ಟಗುಡ್ಡಗಳನ್ನು ಕಡಿದು ನೆಲಸಮ ಮಾಡಿ, ಪಕ್ಷಿಸಂಕುಲವನ್ನೂ, ಪ್ರಾಣಿ ಸಮುದಾಯಗಳನ್ನೂ ನಾಶಮಾಡಿ ಚಂದ್ರಲೋಕದಲ್ಲಿಯ ಬೆಟ್ಟಗುಡ್ಡಗಳನ್ನು ಅಳೆಯುವುದರಲ್ಲಿ ಯಾವ ಜಾಣತನ ಇದೆ? ಈ ಭೂಲೋಕದಲ್ಲಿಯ ಎಲ್ಲ ನೀರಿನ ಮೂಲವನ್ನೂ ಒಣಗಿಸಿ ಅಥವಾ ಮಲಿನಗೊಳಿಸಿ ಆ ಚಂದ್ರಲೋಕದಲ್ಲಿ ನೀರಿನ ಅಂಶ ಇದೆಯೇ ಎಂದು ಪತ್ತೆ ಹಚ್ಚುವ ಪ್ರಯತ್ನದಲ್ಲಿ ಯಾವ ಅರ್ಥವಿದೆ? ಚಂದ್ರಯಾನದ ಯೋಜನೆಯನ್ನು ಕೈಗೆತ್ತಿಕೊಳ್ಳುವ ಮುನ್ನ ಆ ಯೋಜನೆಯ ಅತಿರಥ ಮಹಾರಥರು ಈ ಸಾಮಾನ್ಯವಾದ ವಿಚಾರಗಳ ಬಗ್ಗೆ ಆಲೋಚನೆ ಮಾಡಲಿಲ್ಲವೆ?

ಇದುವರೆಗೆ ಚಂದ್ರಯಾನ ಮಾಡಿರುವ ಅಮೆರಿಕಾ, ಬ್ರಿಟನ್, ರಷ್ಯಾ, ಚೀನಾ, ಜಪಾನ್ ದೇಶಗಳು ವಸಾಹಾತುಶಾಹಿತತ್ವದಲ್ಲಿ ನಂಬಿಕೆಯಿಟ್ಟ, ಬಂಡವಾಳಶಾಹಿ ತತ್ವದಲ್ಲಿ ನಂಬಿಕೆಯಿಟ್ಟ ದೇಶಗಳಾಗಿವೆ. ಅಂದರೆ ಚಂದ್ರಯಾನದ ಹಿಂದೆ ಪೂರ್ಣತಃ ರಾಜಕೀಯ

ಉದ್ದೇಶ್ಯವೇ ಇರುವುದೆಂಬುದು ಸುಸ್ಪಷ್ಟವಾಗಿ ತಿಳಿದು ಬರುತ್ತದೆ. ಖಗೋಳದಲ್ಲಿ ಚಂದ್ರಗ್ರಹ ಒಂದು ಆಯಕಟ್ಟಿನ ಸ್ಥಾನದಲ್ಲಿದೆ. ಮುಂದೆ ಸಂಭವಿಸಬಹುದಾದ ಭೀಕರ ಅಣ್ವಸ್ತ್ರ ಬಳಕೆಯ ಯುದ್ಧದ ಸಮಯದಲ್ಲಿ ಚಂದ್ರನನ್ನೂ ರಣ ತಂತ್ರಕ್ಕೆ ವಿಧ ವಿಧವಾಗಿ ಉಪಯೋಗಿಸಿಕೊಳ್ಳುವ ಸಾಧ್ಯತೆ ಇದೆ. ಈಗ ಹೇಗೆ ತೈಲ ಸಂಪನ್ಮೂಲದ ಮೇಲೆ ಅಧಿಪತ್ಯ ಸಾಧಿಸಿದವರದು ಮೇಲುಗೈಯಾಗುತ್ತದೂ ಅದೇ ರೀತಿ ಚಂದ್ರನ ಮೇಲೆ ಅಧಿಪತ್ಯ ಸಾಧಿಸಿದವರ ಅಥವಾ ಚಂದ್ರನನ್ನು ಯುದ್ಧಕಲೆಗೆ ಉಪಯೋಗಿಸಿಕೊಳ್ಳುವ ತಂತ್ರ ಗೊತ್ತಿರುವ ದೇಶದ ಕೈ ಮೇಲಾಗುತ್ತದೆ ಎಂಬ ಅಭಿಪ್ರಾಯವೇ ಚಂದ್ರಯಾನಕ್ಕೆ ಇಂಧನವಾಗಿದೆಯೇ ಹೊರತು ಲೋಕಕಲ್ಯಾಣದ ಗುರಿಯಂತೂ ಅಲ್ಲವೆಂದು ಖಂಡಿತವಾಗಿ ಹೇಳಬಹುದು.

ರಾಜಕೀಯ ಉದ್ದೇಶ್ಯ, ಮಿಲಿಟರಿ ಉದ್ದೇಶ್ಯ ಭೂಲೋಕದ ಹಿತವನ್ನು ಎಂದೂ ಬಯಸಿಲ್ಲ. ಇದಕ್ಕೆ ಇತಿಹಾಸದ ಪುಟಗಳೇ ಸಾಕ್ಷಿ.

ಏಕಕಾಲಕ್ಕೆ ಇಡೀ ಜಗತ್ತಿನಲ್ಲಿ ಆರ್ಥಿಕ ವ್ಯವಸ್ಥೆಯಲ್ಲಿ ಕುಸಿತವಾದುದಕ್ಕೆ ಕಾರಣ ಏನು? ಆರ್ಥಿಕ ವ್ಯವಹಾರದಲ್ಲಿ ಶಿಸ್ತು ಇಲ್ಲದೇ ಇರುವುದು. ಮನಸೋ ಇಚ್ಛೆ ಸಾಲ ಕೊಡುವುದು, ಅನಾವಶ್ಯಕ ಚಟುವಟಿಕೆಗಳಲ್ಲಿ ಹಣ ತೊಡಗಿಸುವುದು, ಐಷಾರಾಮಿ ಜೀವನ ನಡೆಸುವುದಕ್ಕೆ ಹಣ ಖರ್ಚುಮಾಡುವುದು, ಶಸ್ತ್ರಾಸ್ತ್ರಗಳ ತಯಾರಿಕೆಗಾಗಿ ಹಣ ಖರ್ಚುಮಾಡುವುದು, ಪ್ರಕೃತಿ ಸಂಪತ್ತನ್ನು ವಾಣಿಜ್ಯೀಕರಣಗೊಳಿಸುವುದು, ಅನ್ನಕಾಯಕಕ್ಕೆ ಪ್ರಾಧಾನ್ಯತೆ ಕೊಡುವ ಬದಲು ಹಣದ ಕಾಯಕಕ್ಕೆ ಪ್ರಾಧಾನ್ಯತೆ ಕೊಡುವುದು, ಶಾರೀರಿಕ ಶ್ರಮವನ್ನು ಕಡೆಗಣಿಸಿ ಕೇವಲ ಬೌದ್ಧಿಕ ಶ್ರಮಕ್ಕೆ ಮನ್ನಣೆ ಕೊಡುವುದು, ಅಭಿವೃದ್ಧಿಯ ಹೆಸರಿನಲ್ಲಿ ಅನ್ನ ಬೆಳೆಯುವ ಭೂಮಿಯಲ್ಲಿ ಕಟ್ಟಡಗಳನ್ನೂ, ರಸ್ತೆಗಳನ್ನೂ ನಿರ್ಮಿಸುವುದು, ಸಂಯಮಿತ ಜೀವನ ನಡೆಸುವ ಬದಲು ಅಸಂಯಮಿತ ಜೀವನ ನಡೆಸುವುದು, ಜೀವನವನ್ನು ಧಾರಣೆ ಮಾಡುವ ಮೌಲ್ಯಗಳಿಗೆ ಬೆಲೆ ಕೊಡುವುದರ ಬದಲಾಗಿ ಚಂಚಲತೆಯ ಗುಣವುಳ್ಳ ಹಣಕ್ಕೆ ಬೆಲೆಕೊಡುವುದು ಇಂಥ ಅನೇಕ ಸಂಗತಿಗಳು ಇಂದು ಜಗತ್ತು ಅನುಭವಿಸುತ್ತಿರುವ ಆರ್ಥಿಕ ಅಧೋಗತಿಗೆ ಕಾರಣಗಳಾಗಿವೆ. ಪರಿಸ್ಥಿತಿ ಹೀಗಿರುವಾಗ ಚಂದ್ರಯಾನದಂಥ ಅಂತರಿಕ್ಷ ಸಂಶೋಧನಾ ಯೋಜನೆಗಳು ಮಾನವ ಕುಲಕ್ಕೆ ಎಷ್ಟು ಪ್ರಯೋಜಕ ಎಂಬ ಬಗ್ಗೆ ಇಡೀ ಮಾನವ ಕುಲವೇ ಯೋಚನೆ ಮಾಡಬೇಕಾಗಿದೆ. ಮಾನವ ಕುಲದ ಸಂಸ್ಕೃತಿಯ ಬೆಳವಣಿಗೆಗೆ ಆದ್ಯತೆಗಳಾವವು ಎಂಬುದನ್ನು ಗುರುತಿಸಬೇಕಾಗಿದೆ. ಆದ್ಯತೆಗಳನ್ನು ಗುರುತಿಸದೆ ಗಾಳಿ ಬೀಸಿದಂತೆ ಕೊಡೆ ಹಿಡಿಯುವ ಮನೋಭಾವ ಸಲ್ಲದು.

ಭಾರತದ ಮಟ್ಟಿಗೆ ಹೇಳುವುದಾದರೆ ಚಂದ್ರಯಾನದ ಅಪೇಕ್ಷೆಯ ಬೀಜವನ್ನು ಅದರ ೨೦೦ ವರ್ಷಗಳ ಪಾರತಂತ್ರ್ಯದ ಮನೋ ಭಾವದಲ್ಲಿ ಕಾಣಬಹುದು. ದೀರ್ಘ ಕಾಲದ ಪಾರತಂತ್ರ್ಯದಿಂದ ಹೊರಬಂದ ಭಾರತ ಈಗ ತನ್ನೆಲ್ಲ ಬಲವನ್ನು ಕ್ರೋಢೀಕರಿಸಿ ಬಲಾಢ್ಯ ದೇಶವಾಗಿ ಹೊರಹೊಮ್ಮಿ ಬಂದು ಆ ಪಾರತಂತ್ರ್ಯದ ಕೀಳರಿಮೆಯನ್ನು ಅಳಿಸಿ ಹಾಕಬೇಕೆಂಬ ತೀವ್ರತಮವಾದ ಇಚ್ಛೆ ಚಂದ್ರಯಾನದಂಥ

ಸಾಹಸಕ್ಕೆ ಇಳಿಯಲು ಪ್ರಚೋದಿಸಿದೆ. ಈ ಇಚ್ಛೆ ಒಂದು ಹಂತದವರೆಗೆ ಸಕಾರಾತ್ಮಕ. ಆದರೆ ಆ ಸಾಧನೆಯ ಯಶಸ್ಸನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತದೆಂಬುದರ ಮೇಲೆ ಅದರ ಔಚಿತ್ಯ ಅವಲಂಬಿತವಾಗಿದೆ.

ಈಗಾಗಲೇ ಅಂತರಿಕ್ಷದಲ್ಲಿ ತಮ್ಮ ಬಲಾಢ್ಯತೆಯನ್ನು ಸಾಧಿಸಿರುವ ಅಮೇರಿಕಾ, ಬ್ರಿಟನ್, ಚೈನಾ, ರಷ್ಯಾ, ಜಪಾನ್ ಮುಂತಾದ ದೇಶಗಳು ಭಾರತಕ್ಕೆ ಖಂಡಿತವಾಗಿ ಆದರ್ಶವಾಗಲಾರವು. ನಾವು ತಿಳಿದಿರುವಂತೆ ಈ ದೇಶಗಳು ವಸಾಹತುಶಾಹಿ ಮತ್ತು ಬಂಡವಾಳಶಾಹಿ ವಿಚಾರಗಳಿಂದ ಪ್ರಭಾವಿತವಾಗಿವೆ. ಇವುಗಳಲ್ಲಿ ಅಮೇರಿಕಾ ಬಹುದೊಡ್ಡ ದೋಷಿ ಸ್ಥಾನದಲ್ಲಿದೆ. ಜಗತ್ತಿನಲ್ಲಿ ಹಬ್ಬಿರುವ ಅಶಾಂತಿಗೆ ಅಮೇರಿಕಾ ಬಹುವಾಗಿ ಕಾರಣವಾಗಿದೆ. ಆ ದೇಶಕ್ಕೆ ತನ್ನ ಸ್ವಾರ್ಥದ ಚಿಂತನೆಯಲ್ಲದೆ ಬೇರೆ ಇನ್ನಾವ ಚಿಂತನೆಯೂ ಇಲ್ಲ. ಇನ್ನು ರಷ್ಯಾ ವಸಹಾತುಗಳನ್ನು ಸ್ಥಾಪಿಸಲು ಪ್ರಯತ್ನಪಟ್ಟು ಸೋತು ನಿರಾಶವಾಗಿ ಕುಳಿತಿರುವ ದೇಶ. ಆದರೆ ಅವಕಾಶ ಸಿಕ್ಕರೆ ತನ್ನ ಮೊದಲಿನ ಸ್ವಭಾವವನ್ನು ಅನುಸರಿಸಲು ಸಿದ್ಧ. ಜಪಾನ್ ತನ್ನತನವೆಲ್ಲವನ್ನು ಕಳೆದುಕೊಂಡು ಪಾಶ್ಚಿಮಾತ್ಯ ದೇಶಗಳ ಅನುಕರಣೆಯಲ್ಲಿಯೇ ತನ್ನ ಶ್ರೇಯಸ್ಸನ್ನು ಕಾಣ ಬಯಸುತ್ತಿದೆ. ಚೀನಾ ಇಡೀ ಜಗತ್ತಿಗೆ ತಲೆ ನೋವಾಗಿದೆ. ಅತ್ಯಂತ ಮಹತ್ವಕಾಂಕ್ಷಿ ದೇಶವಾಗಿ ರೂಪಗೊಳ್ಳುತ್ತಿದೆ. ಭಾರತ ಚಂದ್ರಯಾನದಂಥ ಸಾಹಸ ಕೈಗೊಳ್ಳುವುದರ ಮೂಲಕ ಆ ದೇಶಗಳನ ಜೊತೆಗೆ ಸರಿಸಾಟಿಯಾಗಿ ನಿಲ್ಲಲು ಪ್ರಯತ್ನಿಸಿದರೆ ಭಾರತಕ್ಕೆ ಒಳ್ಳೆಯದಾಗುವುದಿಲ್ಲವಷ್ಟೇ ಅಲ್ಲ, ಅದು ಭಾರತದ ಸಂಸ್ಕೃತಿ ಮತ್ತು ಮನೋಭಾವ ಇತ್ಯಾದಿಗಳಿಗೆ ಅನುಗುಣವಾದ ನೀತಿಯಾಗಲಾರದು.

ಅಂತರಿಕ್ಷದಲ್ಲಿಯ ಸಾಧನೆಗಳ ಫಲಶೃತಿಯಾಗಿ ಭೂಲೋಕದ ಜೀವನದಲ್ಲಿ ಬಹಳಷ್ಟು ಮಾರ್ಪಾಟುಗಳಾಗುವ ಸಂಭವ ಇದೆ. ಮನುಷ್ಯನ ಜೀವನದ ಪ್ರತಿಯೊಂದು ಕ್ಷೇತ್ರವೂ ತನ್ನ ಇಂದಿನ ಸ್ವರೂಪವನ್ನು ಕಳಚಿಕೊಂಡು ಹೊಸ ರೂಪ ಪಡೆಯುವುವುದು. ಮೌಲ್ಯಗಳಲ್ಲಿ ಸ್ಥಿತ್ಯಂತರವಾಗುವುದು. ವರ್ತಮಾನದ ಸ್ಥಿತಿಯಿಂದ ಭವಿಷ್ಯದ ಹೊಸ ಪರಿಸ್ಥಿತಿಗೆ ಮನುಷ್ಯ ಮತ್ತು ಅವನು ನಿರ್ಮಿಸಿಕೊಂಡಿರುವ ಸಂಸ್ಥೆಗಳಲ್ಲಿಯ ಸಂಕ್ರಮಣ ಕಾಲ ಶಾಂತಿಯುತ ಆಗಿರಲಾರದು. ಬಹಳಷ್ಟು ಅಶಾಂತಿ, ಹಿಂಸೆಗೆ ಅವಕಾಶವಿದೆ. ಇಂಥ ಪರಿಸ್ಥಿತಿ ಉಂಟಾಗದೆ ಎಲ್ಲವೂ ಸುಗಮವಾಗಿ ಪರಿವರ್ತಿತಗೊಳ್ಳಬೇಕಾದರೆ ಮುಖ್ಯವಾಗಿ ಭೂಲೋಕದ ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕು; ಸರ್ಕಾರದ ರೂಪು ಬದಲಾಗಬೇಕು. ಇಂದಿನ ಪರಿಸರ ವಿರೋಧಿ ಮನೋಭಾವ ಇಟ್ಟುಕೊಂಡು ಹೊಸ ಬಗೆಯ ಜೀವನ ಪದ್ಧತಿಗೆ ಪ್ರಯತ್ನಿಸುವುದರಲ್ಲಿ ತುಂಬ ಅಪಾಯವಿದೆ. ಜಗತ್ತಿಗೆ ಪರ್ಯಾಯ ಮಾರ್ಗ ತೋರಿಸಬೇಕಾದ ಭಾರತ ಮತ್ತು ಇತರ ದೇಶಗಳ ಅಂತರಿಕ್ಷ ಸಾಧನೆಗಳು ಮೊದಲು ಭೂಲೋಕದಲ್ಲಿಯ ಮಾನವನ ಮನೋಭಾವದಲ್ಲಿ, ವ್ಯವಸ್ಥೆಯಲ್ಲಿ ಮಾನವಕುಲಕ್ಕೆ ಕ್ಷೇಮಕರವಾದ ವಿಚಾರ ಹಾಗೂ ಮೌಲ್ಯಗಳನ್ನು ಸ್ಥಾಪಿಸದಿದ್ದಲ್ಲಿ ಮುಂದಿನ ಯುಗ ವಿಜ್ಞಾನ–ತಂತ್ರಜ್ಞಾನದ ಮೂಲಕವೇ ಮನುಕುಲದ ವಿನಾಶದ ಯುಗವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ.

* * *

ಭಾರತದಲ್ಲಿ ಬಡವರು ದಿನದಿಂದ ದಿನಕ್ಕೆ ಬಡವರಾಗುತ್ತಿದ್ದಾರೆಯೇ?

⊙ *ಡಾ.ಕೆ.ಪಿ.ಪ್ರಭಾಕರನ್ ನಾಯರ್*

ನಿಜವಾದ ಭಾರತ ಹಳ್ಳಿಗಳಲ್ಲಿ ಇದೆ ಎಂದು ಗಾಂಧೀಜಿ ಒಮ್ಮೆ ಹೇಳಿದ್ದರು. ಆರ್ಥಿಕ ಸುಧಾರಣೆ ಹಾಗೂ ಜಾಗತಿಕರಣ ವ್ಯವಸ್ಥೆ ಪ್ರಾರಂಭವಾಗಿ ಸುಮಾರು ಎರಡು ದಶಕಗಳು ಆಗುತ್ತಲಿವೆ. ನಿಜವಾದ ಭಾರತ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ವಿಮರ್ಶಾತ್ಮಕವಾಗಿ ತುಲನೆ ಮಾಡುವ ಕಾಲ ಸನ್ನಿಹಿತವಾಗಿದೆ. ದೇಶದಲ್ಲಿರುವ ಬಡತನದ ಬಗ್ಗೆ ವಿಶ್ವಬ್ಯಾಂಕ್‌ನವರು ಬಿಡುಗಡೆ ಮಾಡಿದ ವರದಿ ಎಲ್ಲರನ್ನೂ ತಲ್ಲಣಗೊಳಿಸುತ್ತದೆ. ಸಾಮಾನ್ಯ ಕನಿಷ್ಠ ಆರ್ಥಿಕ ಕಾರ್ಯಕ್ರಮ ಜಾರಿ ಮಾಡುತ್ತೇವೆಂದು ಘೋಷಿಸುತ್ತಾ ಕಳೆದ ನಾಲ್ಕೂವರೆ ವರ್ಷಗಳಿಂದ ಅಧಿಕಾರ ನಡೆಸುತ್ತಿರುವ ಯು.ಪಿ.ಎ (ಸಂಯುಕ್ತ ಪ್ರಗತಿಶೀಲ ಕೂಟ) ಕಾರ್ಯ ವೈಖರಿಯ ಬಗ್ಗೆ ಕಟುವಾಗಿ ವಿಶ್ವಬ್ಯಾಂಕ್ ಟೀಕೆ ಮಾಡಿದೆ. ಅವರು ಬಿಡುಗಡೆ ಮಾಡಿದ ಅಂಕಿ ಅಂಶಗಳು ಪ್ರತಿಯೊಬ್ಬ ಪ್ರಜ್ಞಾವಂತ ಭಾರತೀಯ ಗಮನಿಸಬೇಕಾಗಿದೆ.

೧೯೯೧-೨೦೦೫ ಅಂದರೆ ೧೫ವರ್ಷ ಅವಧಿಯಲ್ಲಿ ಬಡವರ ಸಂಖ್ಯೆ ಸುಮಾರು ನಾಲ್ಕು ಕೋಟಿಯಷ್ಟು ಹೆಚ್ಚಿದೆ. (ಅಂದರೆ ೩೯.೮ ಮಿಲಿಯನ್) ೨೦೦೫ರಲ್ಲಿ ಒಬ್ಬನ ದಿನಗೂಲಿ ರೂ ೫೦ ಎಂದು ಲೆಕ್ಕಕ್ಕೆ ತೆಗೆದುಕೊಂಡರೆ ೧೦ ಭಾರತೀಯರಲ್ಲಿ ೪ ಜನ ಬಡವರು ಇದ್ದಾರೆ (ಅಂದರೆ ಶೇಕಡಾ ೪೨.೨) ಇದು ಅಪಾಯಕಾರಿ ಆಡಳಿತದ ಪರಿಣಾಮ.

ಒಂದು ಕೆ.ಜಿ ಅಕ್ಕಿ ಅಥವಾ ಗೋಧಿ ಬೆಲೆ ೩೦ರೂ, ಸಕ್ಕರೆ ೩೦ರೂ, ಬೇಳೆ ೪೫ರೂ, ಕನಿಷ್ಠ ಬೆಲೆಯ ಖಾದ್ಯ ಎಣ್ಣೆ ಒಂದು ಲೀಟರ್ ೫೦ರೂ ಹೀಗೆ ದಿನಗೂಲಿ ೫೦ರೂ ನಿಂದ ಸಂಸಾರ ನಿರ್ವಹಣೆಗೆ ಎಷ್ಟೊಂದು ಖರೀದಿಸಬಹುದು? ಸರ್ಕಾರದ ಆರ್ಥಿಕ ವ್ಯವಸ್ಥೆ ಬಡವರ ಹೊಟ್ಟೆಗೆ ಬಡಿದಂತಿದೆ. ಇದಕ್ಕೆ ವೈಪರಿತ್ಯವಾಗಿ ಇನ್ನೊಂದು ಚಿತ್ರಣ ಯು.ಪಿ.ಎ ಅಧ್ಯಕ್ಷೆ ಸೋನಿಯಾಗಾಂಧಿ ಆಗಸ್ಟ್ ೨೦೦೮ರಲ್ಲಿ ಅನಂತಪುರ ಮತ್ತು ತಿರುಪತಿಯಲ್ಲಿ ಜರುಗಿದ ಸಭೆಯಲ್ಲಿ ಭಾಗವಹಿಸಿದಾಗ ಆಂಧ್ರಪ್ರದೇಶ ಸರ್ಕಾರ ಬರೀ ಸಾರಿಗೆ ವ್ಯವಸ್ಥೆಗಾಗಿ ೧೫ ಕೋಟಿ ರೂ ಖರ್ಚುಮಾಡಿತು. ದೈನಂದಿನ ಜೀವನ ನಿರ್ವಹಣೆಗಾಗಿ ಒಬ್ಬ ಕೂಲಿಕಾರ ೫೦ ರೂ ಸಂಪಾದಿಸಲು ನರಳುತ್ತಿದ್ದರೆ. ೧೫ ಕೋಟಿಯಷ್ಟು ದೊಡ್ಡ ಮೊತ್ತ ಎಲ್ಲಿಂದ ಬಂತು? ೨೦೦೫ರಲ್ಲಿ ಭಾರತದ ಜನಸಂಖ್ಯೆ ಸುಮಾರು ೧೦೦ ಕೋಟಿ. ಅದರಲ್ಲಿ ಸುಮಾರು ೪೬ ಕೋಟಿಯಷ್ಟು ಬಡವರು. (ಅಂದರೆ ಅವರ ಸರಾಸರಿ ದಿನಗೂಲಿ ೫೦ರೂ) ಅದೇ ವರ್ಷ ಮರುಭೂಮಿಯುತ ಆಫ್ರಿಕಾ ಪ್ರದೇಶದ ಬಡವರ ಸಂಖ್ಯೆ ೩೮ಕೋಟಿ ಅಂದರೆ ಹಿಂದುಳಿದ ಆಫ್ರಿಕಾ ಪ್ರದೇಶವನ್ನು ಹಿಂದೆಹಾಕಿ ಬಡತನದಲ್ಲಿ ಭಾರತ ವಿಕ್ರಮ ಸಾಧಿಸಿದೆ. ಇದು ಯು.ಪಿ.ಎ

ಸರ್ಕಾರದ ಕೊಡುಗೆ.

ಎಲ್ಲಾ ವರ್ಗದವರನ್ನೂ ಒಳಗೊಂಡು ಶೇಕಡಾ ೯ ಆರ್ಥಿಕ ಪ್ರಗತಿ ಸಾಧಿಸಿದ್ದೇವೆ. ಕಳೆದ ೨-೩ ವರ್ಷಗಳಲ್ಲಿ ಹಲವಾರು ಬೃಹತ್ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಉದ್ಯೋಗ ಸಂಸ್ಥೆಗಳನ್ನು ಭಾರತೀಯ ಕಂಪನಿಗಳು ಖರೀದಿ ಮಾಡಿವೆ ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಭಾರತ ಮಹತ್ವದ ಪಾತ್ರ ವಹಿಸುತ್ತಿದೆ. ಪ್ರಗತಿಪರ ರಾಷ್ಟ್ರಗಳು ಭಾರತದ ಪ್ರಗತಿಯನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ನಾವು ಬೀಗುತ್ತಿದ್ದೇವೆ.

ಆದರೆ ವಸ್ತುಸ್ಥಿತಿ ಬಹಳ ನಾಚಿಸುವಂತಿದೆ. ಒಂದುಕಡೆ ಕೋಟಿಗಟ್ಟಲೆ ಬಡವರು ಒಂದು ಹೊತ್ತು ಸರಿಯಾದ ಊಟವಿಲ್ಲದೆ ನರಳುತ್ತಿದ್ದರೆ ಇನ್ನೊಂದು ಕಡೆ ಭಾರತದ ಪ್ರಕೃತಿ ಸಂಪನ್ಮೂಲಗಳನ್ನು ಆಯ್ದು ಕೆಲವುವರಿಷ್ಠರು ಕೊಳ್ಳೆ ಹೊಡೆಯುತ್ತಿದ್ದಾರೆ. ಬಡತನದ ಬಗ್ಗೆ ವರದಿ ಮಾಡಿದ ವಿಶ್ವಬ್ಯಾಂಕ್ ಉಪಯೋಗಿಸಿದ ಮಾನದಂಡವನ್ನು ಒಂದು ವೇಳೆ ಪ್ರಶ್ನಿಸಬಹುದು. ಆದರೆ ಸರ್ಕಾರದ ಶೋಚನೀಯ ಆಡಳಿತವು ಕನ್ನಡಿಯಲ್ಲಿ ಕಾಣುವಂತೆ ಸ್ಪಷ್ಟವಾಗಿದೆ. ಭಾರತ ಸರ್ಕಾರವೇ ಬಿಡುಗಡೆ ಮಾಡಿದ ಅಂಕಿ ಅಂಶಗಳ ಪ್ರಕಾರ ಸೆಪ್ಟಂಬರ್ ೨೦೦೭ರಲ್ಲಿ ಸುಮಾರು ೮೯೭ ಯೋಜನೆಗಳು ಜಾರಿಯಲ್ಲಿ ಇದ್ದವು. ಅವುಗಳ ಪೈಕಿ ೨೭೬ ಯೋಜನೆಗಳ ಮೊತ್ತ ರೂ ೯೫೫೧೩ ಕೋಟಿ. ಈಗ ಹಣದುಬ್ಬರ ಕಾರಣದಿಂದ ರೂ ೧೪೨೩೨೭ ಕೋಟಿ ಖರ್ಚು ಆಗುತ್ತದೆ. ಅಂದರೆ ಶೇಕಡಾ ೩೩.೩ರಷ್ಟು ಹೆಚ್ಚಳ. ಇದರ ಉತ್ತರದಾಯಿತ್ವದ ಬಗ್ಗೆ ಯಾವ ಪ್ರಜ್ಞೆ ಇಲ್ಲ. ಅಂದಾಜು ಮತ್ತು ಖರ್ಚಿನಲ್ಲಿ ಸಾವಿರಾರು ಕೋಟಿ ರೂಪಾಯಿಗಳು ವ್ಯತ್ಯಾಸ ಬರಲು ಹೇಗೆ ಸಾಧ್ಯ? ಬಹುಷಃ ಸರ್ಕಾರದ ಹಣ ಪೋಲಾಗುತ್ತಿರಬಹುದು ಅಥವಾ ಅಕ್ರಮ ಮಾರ್ಗದಲ್ಲಿ ಹೋಗುತ್ತಿರಬಹುದು.

ಯಾವುದೇ ತರಹದ ಕೂಲಂಕುಷ ಹಾಗೂ ಸ್ವತಂತ್ರ ತುಲನೆಗಳು ಇಲ್ಲದೆ ಆರ್ಥಿಕ ಕಾರ್ಯಕ್ರಮಗಳು ಮತ್ತು ಯೋಜನೆಗಳು ಒಂದು ಪಂಚವಾರ್ಷಿಕ ಯೋಜನೆಗಳಿಂದ ಇನ್ನೊಂದು ಪಂಚವಾರ್ಷಿಕ ಯೋಜನೆಗಳಿಗೆ ವರ್ಗಾಂತರ ಅಥವಾ ಬದಲಿ ಮಾಡುತ್ತಿದ್ದಾರೆ. ಇಂತಹ ಸೋರಿ ಹೋಗುತ್ತಿರುವ ವ್ಯವಸ್ಥೆಗಳಿಂದ ಬಡವರು ನರಳುತ್ತಿದ್ದಾರೆ. ಏಕೆಂದರೆ ಅವರ ಧ್ವನಿ ಸ್ತಬ್ಧವಾಗಿದೆ. ದೆಹಲಿ ತನಕ ತಲುಪುತ್ತಿಲ್ಲ. ಈಗಲೂ ಕಾಲ ಮಿಂಚಿ ಹೋಗಿಲ್ಲ ಏಷ್ಯ ಅಭಿವೃದ್ಧಿ ಬ್ಯಾಂಕ್ ವರದಿ ಪ್ರಕಾರ ಪ್ರಗತಿಪರ ಕಾರ್ಯಕ್ರಮಗಳನ್ನು ಸರಿಯಾಗಿ ಕಾರ್ಯಗತ ಮಾಡಿದರೆ ೨೦೨೦ ಇಸವಿ ವೇಳೆಗೆ ಸುಮಾರು ೧೩ ಕೋಟಿ ಜನರನ್ನು ಬಡತನ ರೇಖೆಯಿಂದ ಮೇಲೆತ್ತಿ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಬಹುದು. ಇಲ್ಲದಿದ್ದರೆ ಇದೇ ಕಾರ್ಯವೈಖರಿ ನಡೆದರೆ ೨೦೨೦ರ ಸುಮಾರಿಗೆ ೩ಕೋಟಿ ಜನರನ್ನು ಮಾತ್ರ ಆರ್ಥಿಕವಾಗಿ ಮುಂದು ತರಬಹುದು. ಯು.ಪಿ.ಎ ಸರ್ಕಾರ ಈಗ ಯಾರನ್ನು ಮೇಲೆತ್ತುತ್ತದೆ ಎಂದು ನೋಡಬೇಕಾಗಿದೆ.

* * * (ಅನುವಾದ : ಕೆ.ಆರ್.ಮೋಹನ್, ಮೈಸೂರು)

ಯಾವುದೇ ಅಧಿಕಾರ ಸ್ಥಾನ ಬಯಸದ ಸ್ವಾತಂತ್ರ್ಯ ಯೋಧರು

⊙ ಸತ್ಯವ್ರತ

ಗಂಗಾಧರ್‌ರಾವ್ ದೇಶಪಾಂಡೆ; (೧೮೭೧-೧೯೬೦)

೧೮೯೭ ರವರೆಗೆ ತಮ್ಮ ಶಿಕ್ಷಣ ಮುಗಿಸಿ ರಾನಡೆ, ಗೋಖಲೆ ಮತ್ತು ತಿಲಕರ ಪ್ರಭಾವದಲ್ಲಿ ಇದ್ದು ಪುಣೆಗೆ ಬಂದು ಅಲ್ಲಿ ಇವರ ಪ್ರಭಾವ ವಲಯದೊಳಗೆ ಸೆಳೆಯಲ್ಪಟ್ಟರು. ೧೯೦೫ ರಿಂದ ೧೯೨೦ ರವರೆಗೆ ತಿಲಕರ ಮಾರ್ಗದರ್ಶನದಲ್ಲಿ ಕಾರ್ಯ ಮಾಡಿದರು ಮತ್ತು ಬಲಗೈ ಬಂಟನಂತಿದ್ದರು. ಅನಂತರ ಕಾಕಾ ಕಾಲೇಲ್ಕರರೊಡಗೂಡಿ ಗಾಂಧಿ ಪ್ರಭಾವಕ್ಕೆ ಬಂದರು. ತಿಲಕರ ನಿಧನದ ನಂತರ ಗಾಂಧೀಯವರ ಅಸಹಕಾರ ಚಳುವಳಿಯಲ್ಲಿ ಧುಮುಕಿದರು. ತಿಲಕ್ ಸ್ವಾರಾಜ್ಯ ನಿಧಿ, ರಾಷ್ಟ್ರೀಯ ಶಾಲೆಗಳ ಸ್ಥಾಪನೆ, ವಿದೇಶಿ ವಸ್ತ್ರಗಳ ಬಹಿಷ್ಕಾರ ಮತ್ತು ಹಿಂದೂ-ಮುಸ್ಲಿಂ ಏಕತೆಯಂಥ ಕಾರ್ಯಗಳಲ್ಲಿ ದುಡಿದರು. ೧೯೨೯ರಲ್ಲಿ ಅವರು ತಮ್ಮ ಸ್ವಂತ ಜಮೀನನ್ನು ಗಾಂಧೀ ಸೇವಾ ಸಂಘಕ್ಕೆ ದಾನವಾಗಿ ಅರ್ಪಿಸಿದರು. ೧೯೨೪ರಲ್ಲಿ ನಡೆದ ಬೆಳಗಾಂ ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾದರು. ಅನೇಕ ವರ್ಷ ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ೧೯೨೧, ೧೯೩೦, ೧೯೪೨ರ ಚಳುವಳಿಗಳಲ್ಲಿ ಸೆರೆಮನೆ ಶಿಕ್ಷೆಗೊಳಗಾದರು. ಸ್ವಾತಂತ್ರ್ಯ ನಂತರ ಅವರು ವಿನೋಬಾಜಿಯ ಭೂದಾನ ಚಳುವಳಿಯಲ್ಲೂ ಕಾರ್ಯಮಾಡಿದರು.

ಮಹದೇವ ದೇಸಾಯಿ (೧೮೯೨ - ೧೯೪೨)

ಪದವಿಧರರಾಗಿ, ಕಾನೂನು ಶಿಕ್ಷಣ ಮುಗಿಸಿ ತನಗೆ ಯೋಗ್ಯವಾದ ಕೆಲಸ ಹುಡುಕತೊಡಗಿದರು. ಅದೇ ಸಮಯದಲ್ಲಿ ಲಾರ್ಡ್ ಮಾರ್ಲೆಯವರ 'ಅನ್‌ಕಾಂಪ್ರಮೈಸ್' ಎನ್ನುವ ಗ್ರಂಥವನ್ನು ಗುಜರಾತಿ ಭಾಷೆಗೆ ಅನುವಾದಿಸಿದರು. ಅದಕ್ಕೆ ಒಂದು ಸಾವಿರ ರೂಪಾಯಿ ಬಹುಮಾನ ದೊರಕಿತು. ಸಾಹಿತ್ಯಾಭಿರುಚಿ ಮತ್ತು ಗೀಳನ್ನು ಮುಂದುವರೆಸಿ ಗುಜರಾತಿ, ಇಂಗ್ಲಿಷ್, ಸಂಸ್ಕೃತ, ಬಂಗಾಳಿ ಹಿಂದಿ ಮತ್ತು ಮರಾಠಿ ಸಾಹಿತ್ಯ ಅಭ್ಯಾಸ ಮಾಡಿದರು. ಬ್ಯಾಂಕ್ ನೌಕರಿಯನ್ನು ಬಿಟ್ಟು ೧೯೧೭ರಲ್ಲಿ ಗಾಂಧೀಜಿಯ ಆಪ್ತ ಕಾರ್ಯದರ್ಶಿಯಾದರು ಮತ್ತು ತಮ್ಮ ಜೀವನದ ಕೊನೆಯ ದಿನದ ವರೆಗೂ ಗಾಂಧೀ ಸಂಗತಿಯಲ್ಲಿ ಉಳಿದರು. ಗಾಂಧೀಜಿಗೆ ಮಗನಿಗೂ ಹೆಚ್ಚಾಗಿ ಗಾಢ ಸಂಬಂಧ ಬೆಳೆಸಿದರು. ಗಾಂಧೀಜಿಯ ಜೀವಗೆಳೆಯ, ಆಪ್ತಮಿತ್ರ ಎಂದೆನಿಸಿಕೊಂಡರು. ಗಾಂಧೀಜಿಯ ಎಲ್ಲಾ ಸತ್ಯಾಗ್ರಹಗಳಲ್ಲೂ ಅವರ ಜೊತೆಗೂಡಿ 'ಹರಿಜನ' ಮತ್ತು 'ನವಜೀವನ' ಪತ್ರಿಕೆಗಳಿಗೆ ಹೇರಳವಾಗಿ ಬರೆದರು. ವ್ಯಾಪಕ ವಿಷಯಾಭಿರುಚಿ, ವಿದ್ವತ್ತು, ಬುದ್ಧಿ ಕುಶಾಗ್ರತೆ, ಸರಳ ಶೈಲಿ ಮತ್ತು ಭಾಷಾ ಶುದ್ಧಿ ಇತ್ಯಾದಿ ಎದ್ದು ಕಾಣುತ್ತಿದ್ದವು. ಅವರ ದಿನಚರಿಯಲ್ಲಿಯ

ವಿವರಗಳು ಎಚ್ಚರಿಕೆ ಮತ್ತು ವಿಚಕ್ಷಣತೆಯಿಂದ ಕೂಡಿದ್ದು ಹತ್ತು ಸಂಪುಟಗಳಲ್ಲಿ ಅವರ ಮರಣಾಂತರ ಪ್ರಕಟವಾದವು. 'ಸಿಲೋನಿನಲ್ಲಿ ಗಾಂಧಿಯೊಡನೆ', 'ಬಾರ್ಡೋಲಿಯ ಕಥೆ', 'ಎಕ್ಲಿಪ್ಸ್ ಆಫ್ ಫ್ಯೆಥ್', 'ದಿ ನೇಷನ್ಸ್ ವಾಯ್ಸ್', 'ದಿ ಎಪಿಕ್', 'ಗಾಂಧೀ ಸೇವಾ ಸಂಘ', 'ಮೌಲಾನಾ ಅಬುಲ್ ಕಲಾಂ ಅಜಾದ್', 'ಗೀತಾ ಅಕಾರ್ಡಿಂಗ್ ಟು ಗಾಂಧೀ', 'ವೀರ ವಲ್ಲಭ ಭಾಯಿ', 'ಬೆ ಖುದಾಯಿ ಖಿದ್ಮತ್', 'ಏಕ್ ಧರ್ಮ ಯುದ್ಧ್', 'ಸೇಂಟ್ ಫ್ರಾನ್ಸಿಸ್‌ನ ಜೀವನ ಚರಿತ್ರೆ', ಇವು ಅವರು ಬರೆದ ಗ್ರಂಥಗಳಲ್ಲಿ ಕೆಲವು. ಇನ್ನೂ ಅನೇಕ ಪುಸ್ತಕಗಳನ್ನು ಗುಜರಾತಿಗೆ ಅನುವಾದಿಸಿದರು. ಮಹದೇವ ಭಾಯಿ ಅವರನ್ನು ಗಾಂಧೀಯವರ ಬಾಸ್‌ವೇಲ್ ಎಂದು ಕೆಲವರು ಕರೆದರು.

ಭಗವಾನ್ ದಾಸ್ (೧೮೬೯–೧೯೫೮)

ದಾಸ್ ತಮ್ಮ ೧೭ನೇ ವಯಸ್ಸಿನಲ್ಲೇ ಶಿಕ್ಷಣ ಮುಗಿಸಿ, ೧೮೯೦–೧೮೯೯ರ ವರೆಗೆ ಸರ್ಕಾರಿ ನೌಕರಿಯಲ್ಲಿದ್ದು ಅನಂತರ ಸಾರ್ವಜನಿಕ ಸೇವಾ ಕಾರ್ಯಕ್ಕಿಳಿದರು. ವಿಶೇಷತಃ ಶೈಕ್ಷಣಿಕ ಕ್ಷೇತ್ರದಲ್ಲಿ ತುಂಬಾ ಶ್ರಮಿಸಿದರು. ಕಾಶೀ ವಿದ್ಯಾಪೀಠದ ಮುಖ್ಯಸ್ತರಾಗಿ ೧೯೨೧ ರಿಂದ ೧೯೨೬ರ ವರೆಗೆ ಕಾರ್ಯಮಾಡಿದರು. ಅಸಹಕಾರ ಚಳುವಳಿಯಲ್ಲಿ ಸೆರೆಮನೆಗೆ ಸೇರಿದರು. ೧೯೨೮ರಲ್ಲಿ ಸರ್ವ ಪಕ್ಷಗಳ ಸಮ್ಮೇಳನದಲ್ಲಿ ಸಕ್ರಿಯವಾಗಿದ್ದರು. ೧೯೩೦–೩೧ರ ಸವಿನಯ ಕಾನೂನು ಭಂಗ ಚಳುವಳಿಯಲ್ಲಿ ಧುಮುಕಿದರು. ದಾಸರು ಸಾಮಾಜಿಕ–ಧಾರ್ಮಿಕ ಸುಧಾರಕರಾಗಿ, ಗ್ರಾಮೀಣ ಅರ್ಥ ವ್ಯವಸ್ಥೆಯ ಪ್ರತಿಪಾದಕರಾಗಿದ್ದರು. ವೈದಿಕ ಆದರ್ಶ ಮತ್ತು ಧ್ಯೇಯವಾದಗಳಿಂದ ತುಂಬಾ ಪ್ರಭಾವಿತರಾಗಿದ್ದರು. 'ದಿ ಎಸೆನ್ಷಿಯಲ್ ಯೂನಿಟಿ ಆಫ್ ಆಲ್ ಸಿಟಿಜನ್ಸ್', ಆಧುನಿಕ ಸಮಸ್ಯೆಗಳಿಗೆ ಪ್ರಾಚೀನ ಪರಿಹಾರಗಳು, ಆಧುನಿಕ ಸಮಾಜಗಳ ಸಾಮಾಜಿಕ ಪುನರ್‌ರಚನೆ ಮುಂತಾದ ಗಂಭೀರ ಗ್ರಂಥಗಳನ್ನು ರಚಿಸಿದರು. ಭಗವದ್ಗೀತೆಯ ಅವರ ಅನುವಾದ ಪಂಡಿತರೂ ಪಾಮರರೂ ಮೆಚ್ಚುವಂತಾಯಿತು.

ಜಮನಾಲಾಲ್ ಬಜಾಜ್ (೧೮೮೯–೧೯೪೨)

ಜಮನಲಾಲರು ೧೯೦೮ರಲ್ಲಿ ಗೌರವ ಮ್ಯಾಜೀಸ್ಟ್ರೇಟರಾಗಿದ್ದರು. ೧೯೧೮ರಲ್ಲಿ ರಾಯ್ ಬಹದ್ದೂರ್ ಆದರು. ಗಾಂಧೀಜಿಯವರನ್ನು ೧೯೧೫ರಲ್ಲಿ ಮೊದಲ ಬಾರಿಗೆ ಕಂಡರು. ಬಹುವಾಗಿ ಪ್ರಭಾವಿತರಾದರು. ಗಾಢ ಸಂಬಂಧ ಬೆಳೆಯಿತು. ತಮ್ಮನ್ನು ಐದನೆ ಮಗನನ್ನಾಗಿ ಮಾಡಿಕೊಳ್ಳಿ ಎಂದು ಕೇಳಿಕೊಂಡರು. ಗಾಂಧೀ ಒಪ್ಪಿದರು. ನಾಗಪುರ ಕಾಂಗ್ರೆಸ್‌ನ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಜೀವನ ಪರ್ಯಂತ ಕಾಂಗ್ರೆಸ್‌ನ ಖಜಾಂಚಿಯಾಗಿದ್ದರು. ಅಸಹಕಾರ ಆಂದೋಲನದಲ್ಲಿ, ನಾಗಪುರ ಧ್ವಜ ಸತ್ಯಾಗ್ರಹ, ೧೯೪೧ರ ವೈಯಕ್ತಿಕ ಸತ್ಯಾಗ್ರಹಗಳಲ್ಲಿ ದೀರ್ಘಕಾಲ ಸೆರೆಮನೆ ವಾಸದಲ್ಲಿದ್ದರು. ಗಾಂಧೀ ಸೇವಾ ಸಂಘ ಸ್ಥಾಪಿಸಿ ಸತ್ಯಾಗ್ರಹಿಗಳ ಪರಿವಾರಗಳ ಯೋಗಕ್ಷೇಮಕ್ಕಾಗಿ ಮತ್ತು ಕಾರ್ಯಕರ್ತರ ಸೈದ್ಧಾಂತಿಕ ಶಿಕ್ಷಣಕ್ಕಾಗಿ ಕಾರ್ಯ ಮಾಡಿದರು. ನಾಗಪುರ ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ಸಸ್ತಾ ಸಾಹಿತ್ಯ ಮಂಡಲ ಸ್ಥಾಪಿಸಿದರು. ಅಖಿಲ

ಭಾರತ ಚರಖಾ ಸಂಘದ ಖಜಾಂಚಿಯಾಗಿದ್ದರು. ಕಾಂಗ್ರೆಸ್‌ನ ಅಸ್ಪೃಶ್ಯತಾ ನಿವಾರಣಾ ಸಮಿತಿಯ ಕಾರ್ಯದರ್ಶಿಯಾಗಿ ದುಡಿದರು. ಹರಿಜನರಿಗಾಗಿ ಮಂದಿರ ಪ್ರವೇಶಕ್ಕಾಗಿ ಚಳವಳಿ ಹೂಡಿದರು. ೧೯೩೫ರಲ್ಲಿ ಗಾಂಧೀಜಿಯವರನ್ನು ವಾರ್ಧಾಕ್ಕೆ ತಂದರು. ಸೇವಾಗ್ರಾಮದಲ್ಲಿ ಜಮೀನು ಕೊಟ್ಟು ಕುಟೀರಗಳನ್ನು ನಿರ್ಮಿಸಿ ಆಶ್ರಮ ಆರಂಭಿಸುವಂತೆ ಮಾಡಿದರು. ೧೯೪೨ರಲ್ಲಿ ಜಯಪುರ ಸಂಸ್ಥಾನದ ಜನತೆಗೆ ಪ್ರಜಾತಾಂತ್ರಿಕ ಹಕ್ಕಿಗಾಗಿ ಹೋರಾಡಿ ಅಲ್ಲಿಯೇ ಗೃಹಬಂಧನಕ್ಕೊಳಗಾದರು. ೧೯೪೧ರಲ್ಲಿ ಗೋ ಸೇವಾ ಸಂಘ ಸ್ಥಾಪಿಸಿ ಜೀವನದ ಕೊನೆಗಾಲವನ್ನು ಗೋಸೇವೆಯಲ್ಲಿ ಕಳೆದರು.

ಚಿತ್ತರಂಜನ್ ದಾಸ್ (೧೮೭೦-೧೯೨೫)

ಶಿಕ್ಷಣ ಮುಗಿಸಿ ೧೮೯೪ರಲ್ಲಿ ವಕೀಲರಾದರು. ೧೯೦೮ರಲ್ಲಿ ಅಲಿಪುರ ಬಾಂಬ್ ಮೊಕದ್ದಮೆಯಲ್ಲಿ ಸೆರೆಮನೆಯಲ್ಲಿದ್ದ ಅರವಿಂದರ ವಕೀಲರಾಗಿ ಶ್ರೇಷ್ಠ ದರ್ಜೆಯ ವಾಙ್ಮಿಯಾಗಿ ಬೆಳೆದರು. ಢಾಕಾ ಪಿತೂರಿ ಮೊಕದ್ದಮೆಯಲ್ಲೂ ೧೯೧೦-೧೧ರಲ್ಲಿ ಹೋರಾಟಗಾರರ ರಕ್ಷಕರಾಗಿ ಶ್ರಮಿಸಿದರು. ಅನುಶೀಲನ ಸಮಿತಿಯಂಥ ಕ್ರಾಂತಿಕಾರಿ ಸಂಘಟನೆಗಳಲ್ಲೂ ದುಡಿದರು. ಸ್ವದೇಶಿ ಚಳುವಳಿಯ ಮುಂದಾಳು, ರಾಷ್ಟ್ರೀಯ ಲೇಖಕರಾಗಿ ಜನತೆಯನ್ನು ಹುರಿದುಂಬಿಸಿದರು. ೧೯೧೭ರಲ್ಲಿ ನೇರವಾಗಿ ರಾಷ್ಟ್ರೀಯ ಚಳುವಳಿಗೆ ಧುಮುಕಿದರು. ಮೌಂಟ್ ಫೋರ್ಡ್ ಸುಧಾರಣೆಗಳನ್ನು ವಿರೋಧಿಸಿದರು. ೧೯೨೦ರ ಕಲ್ಕತ್ತಾ ಕಾಂಗ್ರೆಸ್ ವಿಶೇಷ ಸಮಾವೇಶದಲ್ಲಿ ಗಾಂಧಿಯವರ ಅಸಹಕಾರ ಚಳುವಳಿಯನ್ನು ವಿರೋಧಿಸಿದರು. ಆದರೆ ಮುಂದೆ ಅದನ್ನು ಪೂರ್ಣವಾಗಿ ಒಪ್ಪಿಕೊಂಡು ಅದರಲ್ಲಿ ಹೃದಯಪೂರ್ವಕ ಕಾರ್ಯಮಾಡಿದರು. ೧೯೨೧ರಲ್ಲಿ ಅನ್ಯ ಕಾಂಗ್ರೆಸ್ ನಾಯಕರೊಡನೆ ಸೆರೆಮನೆ ಸೇರಿದರು. ಗಯಾ ಕಾಂಗ್ರೆಸ್ ಅಧ್ಯಕ್ಷರಾದರು. ಅನ್ಯ ಸಮಾನ ಮನಸ್ಕರ ಜೊತೆಗೂಡಿ ಸ್ವರಾಜ್ಯ ಪಕ್ಷ ಕಟ್ಟಿದರು. ೧೯೨೪ರಲ್ಲಿ ನಡೆದ ಕಲ್ಕತ್ತಾ ಮಹಾನಗರ ಪಾಲಿಕೆಯಲ್ಲಿ ಗೆದ್ದು ಮೇಯರ್ ಆದರು. ಗಾಂಧೀಜಿ ಸ್ವರಾಜ್ಯ ಪಕ್ಷವನ್ನು ಒಪ್ಪಿಕೊಂಡು ದಾಸ್‌ರೊಡನೆ ಒಪ್ಪಂದಕ್ಕೆ ಸಹಿ ಹಾಕಿದರು. ಚಿತ್ತರಂಜನ್ ದಾಸ್ ಕವಿಗಳೂ ಆಗಿದ್ದರು. ಅನೇಕ ಕವಿತೆಗಳ ಸಂಗ್ರಹಗಳನ್ನು ಪ್ರಕಟಿಸಿದರು.

* * * * *

ದೇವರು ಎಂದರೆ ಏನು? ಯಾರು?

⊙ *ಜರಗನಹಳ್ಳಿ ಶಿವಶಂಕರ್*

ದೇವರು ಎಂದರೆ ನಿಘಂಟಿನ ಪ್ರಕಾರ ಪರಮಾತ್ಮ, ಭಗವಂತ ಎಂಬ ಅರ್ಥಗಳು ಸಿಗುತ್ತವೆ. ಪರಮಾತ್ಮ ಎಂಬುದಕ್ಕೆ ದೇವರು, ಪರಬ್ರಹ್ಮ ಎಂಬ ಅರ್ಥಗಳು ಸಿಗುತ್ತವೆ. ಭಗವಂತ ಎಂದರೂ ದೇವರು, ಪರಮಾತ್ಮ ಎಂಬ ಅರ್ಥಗಳು ಮಾತ್ರ ಸಿಗುತ್ತವೆ. ಅಳಿಯ ಅಲ್ಲ ಮಗಳ ಗಂಡ ಎಂಬಂತೆ.

ಭಗವಂತ ಎಂಬ ಪದ ಮನುಷ್ಯನ ಚಿಂತೆಯೊಳಗೆ ಹೇಗೆ ಬಂದಿತು ಎಂಬುದೇ ಒಂದು ದೊಡ್ಡ ವಿಸ್ಮಯ. ಭಗವಂತ ಎಂಬ ಪದವನ್ನು ವಿಭಜಿಸಿ ಅದರ ಅರ್ಥವಿಶ್ಲೇಷಣೆಗೆ ತೊಡಗಿದರೆ : ಗ್ರಹಗಳ ಕೇಂದ್ರಬಿಂದುವಾದ 'ಸೂರ್ಯ' ಎಂಬ ಅರ್ಥವೂ ಸೇರಿದಂತೆ ಸಕಲ ಜೀವರಾಶಿಯ ಹುಟ್ಟಿಗೆ ಮೂಲಕಾರಣ ಮೊದಲಾದ ಅರ್ಥಗಳೂ ಸಿಗುತ್ತವೆ. ಇಂತಹ ಅರ್ಥಗಳಿಂದ ಹೆಚ್ಚಿನ ತೃಪ್ತಿಯಾಗುವುದಿಲ್ಲ. 'ಸೂರ್ಯ' ಈ ಅನಂತ ಆಕಾಶದೊಳಗೆ ಹೇಗೆ ಬಂದ? ಎಲ್ಲಿಂದ ಬಂದ? ಅಥವಾ ಏಕೆ ಬಂದ? ಬಂದಿರುವುದಲ್ಲದೆ ನಿಖರವಾದ ಕಾಲವನ್ನು ಅನುಸರಿಸಿ ಯಾವ ಪುರುಷಾರ್ಥಕ್ಕಾಗಿ ಅವಿರತ ದುಡಿಯಲು ನಿಂತ? ಅವನ ದುಡಿಮೆಗೆ ಆಜ್ಞೆ ಮಾಡಿದವರು ಯಾರು? ಅವನ ದುಡಿಮೆಗೆ ಯಾವ ಪ್ರತಿಫಲದ ಅಪೇಕ್ಷೆ ಇದೆ?....ಲೌಕಿಕಕ್ಕೆ ಅಂಟಿಕೊಂಡಿರುವ ಮನುಷ್ಯನ ಮನಸ್ಸು ಈ ರೀತಿ ಯೋಚಿಸುವುದು ಸಹಜವೇ.

ಸೂರ್ಯನನ್ನೇ ದೇವರೆಂದು ನಂಬಿಬಿಡುವುದಾದರೆ ಅವನನ್ನು ಸೃಷ್ಟಿಸಿದ ಮತ್ತೊಬ್ಬ ದೇವರು ಇರಬೇಕಲ್ಲವೆ! ಅಥವಾ ಅವನನ್ನೂ ಸೃಷ್ಟಿಸಿದ ಮತ್ತೊಬ್ಬ ದೇವರೂ ಇರಲೇಬೇಕಲ್ಲ. ಹೀಗೆ ಪ್ರಶ್ನೆಗಳ ಬಾಲ ಬೆಳೆದು ತಲೆ ಸುತ್ತಲು ಪ್ರಾರಂಭವಾಗುವುದು ಸಹಜ. ಸೂರ್ಯನೂ ಸಹ ನೆಲೆಸಿರುವುದು ಅಥವಾ ಆಶ್ರಯ ಪಡೆದು ನಿಂತಿರುವುದು ಅನಂತ ಆಕಾಶದಲ್ಲಿ, ಅರ್ಥಾತ್ ಶೂನ್ಯದಲ್ಲಿ. ಸೂರ್ಯನನ್ನು ಯೋಚಿಸುವ ಜೊತೆಯಲ್ಲೇ ಅವನು ನಿಂತಿರುವ ನೆಲೆ 'ಶೂನ್ಯ' ಅದು ಏನು? ಸೂರ್ಯ ಉಳಿದು ನಿಲ್ಲಲು ಅವಕಾಶ ಮಾಡಿಕೊಟ್ಟ ಶೂನ್ಯದ ಪಾತ್ರ ಏನು? ಹಾಗಾದರೆ ಶೂನ್ಯದ ಸೃಷ್ಟಿಯಾದರೂ ಏನು? ಕಣ್ಣಿಗೆ ಕಾಣುವ ಸೂರ್ಯ ಹೆಚ್ಚೋ, ಕಣ್ಣಿಗೆ ನಿಲುಕದ ಶೂನ್ಯ ಹೆಚ್ಚೋ? ಶೂನ್ಯ ಎಂಬುದು ಮೊದಲೋ, ಸೂರ್ಯಮಂಡಲ, ನಕ್ಷತ್ರಪುಂಜಗಳು, ಏಳೇಳು ಲೋಕಗಳು ಮತ್ತು ಬ್ರಹ್ಮಾಂಡ ಮೊದಲೋ? ಉತ್ತರ ಸಿಗುವುದಿಲ್ಲ. ಮೊಟ್ಟೆ ಮೊದಲೋ ಅಥವಾ ಕೋಳಿ ಮೊದಲೋ ಎಂಬಂತೆ, ನಂಬಿಕೆ ಅರ್ಥದ ಮೆಟ್ಟಿಲುಗಳು. ನಂಬುವವರೆಗೂ ಸಾಗುವ ದಾರಿಯ ಅರ್ಥ ಸಿಗುವುದಿಲ್ಲ. ಹೌದು, ತಿಳಿದುಕೊಂಡರೆ! ಆದರೆ ಬದು-ಕಿಗೆ ಆಗುವ ಲಾಭವಾದರೂ ಏನು? ಹುಟ್ಟಿಸಿದವನು ಹುಲ್ಲು ಮೇಯಿಸಲಾರನೇ ಎಂಬಂತೆ ಹುಟ್ಟಿಗೆ ಕಾರಣನಾದವನು ಒಂದು ಗತಿ ಕಾಣಿಸಿಯೇ ತೀರುತ್ತಾನೆ ಎಂಬ ಸಮಾಧಾನ.

ಅಗಾಧ, ಅನನ್ಯ, ನಿಗೂಢವಾದ ದೇವರ ಅಸ್ತಿತ್ವವನ್ನು ಯೋಚಿಸುವ ಸಾಮರ್ಥ್ಯ ಹುಲುಮಾನವನಿಗೆ ಇದೆಯೇ? ಎಂಬುದು ಮುಖ್ಯಪ್ರಶ್ನೆ.

ಮನುಷ್ಯನ ಲಹರಿಗೆ ಅಥವಾ ಅವನು ಕಲ್ಪಿಸಿಕೊಂಡ ರೂಪಕ್ಕೆ ಅನುಗುಣವಾಗಿ ದೇವರನ್ನು ಸೃಷ್ಟಿಸಿಕೊಂಡಿರುವ ಅಗಣಿತ ನಿದರ್ಶನಗಳು ನಮ್ಮ ನಡುವೆ ಇವೆ. ಮನುಕುಲವನ್ನು ಸದಾ ಕಾಡುತ್ತ ಬಂದಿರುವ ಅಸಮಾನತೆಯ ವಿಷಯದಲ್ಲಿ 'ದೇವರು' ಎಂಬ ವಾದವು ಪ್ರಧಾನವಾದ ಪಾತ್ರವಹಿಸಿದೆ. ತಾವು ನಂಬಿರುವ 'ದೇವರು' ಮಾತ್ರ ಅಂತಿಮವಾದದ್ದು ಎಂಬ ಬಲವಾದ ಹುಂಬು ನಂಬಿಕೆಯು ಮೇಲು-ಕೀಳು ಎಂಬ ಭಾವನೆಗಳಿಗೆ ಕಾರಣವಾಗಿದೆ. ಅದು ಮನುಷ್ಯನ ವಿಚಲಿತ ಮನಸ್ಸಿನ ಪ್ರತೀಕವೂ ಆಗಿದೆ.

ಮನುಷ್ಯ ಒಬ್ಬ ಹುಚ್ಚ. ಒಂದು ಚಿಕ್ಕ ಹುಳುವನ್ನೂ ಸೃಷ್ಟಿಸಲಾರದ ಆತ ಕೋಟಿಗಟ್ಟಲೆಯಲ್ಲಿ ತನಗೆ ಬೇಕಾದ ದೇವರುಗಳನ್ನು ಸೃಷ್ಟಿಸಿಕೊಂಡಿದ್ದಾನೆ! ಎಂದು ವಿಚಾರವಾದಿ ಮಾಂಟೆಗ್ಯೂ ಹೇಳಿದ್ದಾನೆ.

ಕಷ್ಟಕಾರ್ಪಣ್ಯಗಳಿಂದ ಪಾರುಮಾಡಲು ಇಲ್ಲವೆ ಯೋಗಕ್ಷೇಮವನ್ನು ಕಾದುಕೊಳ್ಳಲು, ಸುಖಸಂತೋಷಗಳನ್ನು ನೀಡಲು 'ದೇವರು' ತನಗೆ ಬೇಕೇಬೇಕೆಂದು ಮನುಷ್ಯನು ಬಯಸುತ್ತಾನೆ. ತನ್ನಲ್ಲಿರುವ ಭಯ-ಭೀತಿ ಮತ್ತು ಆತಂಕಗಳಿಗೆ ಕಾರಣವಾಗಿರುವ ದುಷ್ಟಶಕ್ತಿಗಳಿಗೂ ಮೀರಿದ, ಬಲಶಾಲಿಯಾದ ಶಕ್ತಿಯನ್ನು ದೇವರೆಂದು ನಂಬುತ್ತಾನೆ. ದುಷ್ಟಶಕ್ತಿಗಳ ಕಾರ್ಯವೈಖರಿಯ ನಿವಾರಣೆಗಾಗಿ ಮೊರೆಯಿಡುತ್ತಾನೆ, ಪ್ರಾರ್ಥಿಸುತ್ತಾನೆ, ಪೂಜಿಸುತ್ತಾನೆ, ದೇವರು ತನ್ನವನಾಗಬೇಕೆಂದು ಆಸೆ ಪಡುತ್ತಾನೆ, ಹಂಬಲಿಸುತ್ತಾನೆ.

ಇವೆಲ್ಲವೂ ಒಬ್ಬ ಮನುಷ್ಯನು ದೇವರು ಅಸ್ತಿತ್ವವನ್ನು ಒಪ್ಪಿಕೊಂಡ ಮೇಲೆ ತಲೆದೋರುವಂಥವು.

ನನ್ನನು ಹುಟ್ಟಿಸಿರುವ ದೇವರು ನನಗೆ ಇಷ್ಟು ಕಷ್ಟಗಳನ್ನು ಕೊಡಬಹುದೆ? ಹುಟ್ಟಿಗೆ ಕಾರಣನಾಗಿರುವ ಆ ದೇವರಿಗೆ ನನ್ನ ಯೋಗಕ್ಷೇಮವನ್ನು ನೋಡಿಕೊಳ್ಳುವ ಜವಾಬ್ದಾರಿಯೂ ಇಲ್ಲವೆ? ಎಂದು ಪ್ರಲಾಪಿಸುತ್ತಾನೆ. ನನ್ನನ್ನು ಸೃಷ್ಟಿಸಿ ಅವನಿಗೇನು ಲಾಭ? ಮಕ್ಕಳನ್ನು ಸಂತೈಸಲು ನೀಡುವ ಆಟಿಕೆಗಳಂತೆ ನಾವು ಅವನು ಆಟಕ್ಕೆ ಬಳಸುವ ಗೊಂಬೆಗಳೇ? ನನ್ನಲ್ಲಿ ತೀರದ ಸಂಶಯಗಳನ್ನೂ, ಪ್ರಶ್ನೆಗಳನ್ನೂ, ನಿಗೂಢಗಳನ್ನೂ, ವಿಸ್ಮಯಗಳನ್ನೂ ಏಕೆ ಇಟ್ಟಿದ್ದಾನೆ? ಈ ಗೊಂದಲಗಳಿಗೆ ಮನುಷ್ಯನೇ ಉತ್ತರ ಕಂಡುಕೊಳ್ಳಬೇಕೆ ಅಥವಾ ಕೆಲವರಿಗೆ ಮಾತ್ರ ಅವನ ದಿವ್ಯದರ್ಶನದ ವಿರಾಟ್‌ರೂಪವನ್ನು ತೋರಿಸಿ ಕೃತಾರ್ಥರನ್ನಾಗಿಸಿ ಉಳಿದವರಿಗೆ ಮಲತಾಯಿ ಧೋರಣೆ ತೋರಿದಂತಾಗುವುದಿಲ್ಲವೆ? ಎಂದೆಲ್ಲ ಪ್ರಶ್ನೆಗಳು ತಲೆದೋರುತ್ತವೆ.

ಪರ್ವತಕ್ಕು ಸಾಗರಕ್ಕು ನಡುವೆ ನದಿ ಸೇತುವೆಯಾಗಿ ಸಂಬಂಧ ಕಲ್ಪಿಸುತ್ತದೆ; ನನಗು ದೇವರಿಗು ನಡುವೆ ನನ್ನ ಹಾಡು ಸಂಬಂಧ ಕಲ್ಪಿಸುತ್ತದೆ.

ಎಂದು ರವೀಂದ್ರನಾಥ ಠಾಕೂರರು ತಮ್ಮ ಒಂದು ಕವಿತೆಯಲ್ಲಿ ಹೇಳಿದ್ದಾರೆ. ಇಲ್ಲಿ ಠಾಕೂರರು ತಮ್ಮ ನಂಬಿಕೆಯ ದೇವರನ್ನು ಹೊಂದಿದ್ದರು ಎಂಬ ಅಭಿಪ್ರಾಯವಾಗುತ್ತದೆ. ಆದರೆ ಅವರ ನಂಬಿಕೆಯ ಆ ದೇವರು ಯಾರು ಎಂಬುದು ಮಾತ್ರ ನಿಖರವಾಗಿ ಹೇಳಲು ಸಾಧ್ಯವಾಗದು.

ಪ್ರಪಂಚಕ್ಕೆ ದೇವರು ಹೇಗೆ ಬೇಕೋ ಹಾಗೆಯೇ
ದೇವರಿಗೂ ಪ್ರಪಂಚ ಬೇಕೇ ಬೇಕು.

ಎಂದು ಸರ್ವಪಲ್ಲಿ ರಾಧಾಕೃಷ್ಣನ್ ಪ್ರತಿಪಾದಿಸಿದ್ದಾರೆ.

ಅಂದರೆ ದೇವರು ಮತ್ತು ಪ್ರಪಂಚದ ನಡುವೆ ಅವಿನಾಭಾವ ಸಂಬಂಧವಿದೆ ಎಂದು ಈ ಮಾತು ಹೇಳುತ್ತದೆ. ಅಥವಾ ದೇವರಲ್ಲಿ ನಾವಿದ್ದೇವೆ, ನಮ್ಮೊಳಗೆ ದೇವರಿದ್ದಾನೆ ಎಂಬ ವಿಚಾರವೂ ವೇದ್ಯವಾಗುತ್ತದೆ.

ಊಹಿಸಲೂ ಸಾಧ್ಯವಾಗದ ಈ ನಿಲುಕದ ಜಗತ್ತು ಈ ಮನುಷ್ಯನ ಅಸ್ತಿತ್ವಕ್ಕಾಗಿ ಇದೆಯೇ? ನೆಲಕ್ಕೆ ಅಂಟಿಕೊಂಡಿರುವ ಈ ಮನುಷ್ಯನಿಗೆ ಇಷ್ಟು ದೊಡ್ಡ ವಿಶ್ವ ಏಕೆ ಬೇಕಿದೆ? ಅಥವಾ ಅನ್ಯಗ್ರಹಗಳ, ಅನ್ಯಲೋಕಗಳ ಆವಶ್ಯಕತೆಯಾದರೂ ಏನು? – ಎಂಬ ಪ್ರಶ್ನೆಗಳು ನಾವು ಅನುಭವಿಸುತ್ತಿರುವ ಸವಲತ್ತುಗಳ ಬಗ್ಗೆ ಏಳುತ್ತವೆ.

ಒಮ್ಮೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಉಡುಪಿಯಲ್ಲಿ ಉಪನ್ಯಾಸ ನೀಡುತ್ತಿದ್ದ ಸಂದರ್ಭದಲ್ಲಿ ಶ್ರೋತೃಗಳಲ್ಲಿ ಒಬ್ಬರು ಎದ್ದು ನಿಂತು, "ಮನುಷ್ಯನ ಮನಸ್ಸಿಗೆ 'ದೇವರು' ಎನ್ನುವ ವಿಚಾರ ಪ್ರಶ್ನೆ, ಅರಿವು ಮೂಲವಾಗಿ ಹೇಗೆ ಬಂತು? ಹಾಗೆ ಬಂದಿದ್ದರೂ ಅದು ಮನುಷ್ಯನಿಂದಲೇ ಉದ್ಭವವಾದ 'ಪದ', 'ವಿಚಾರ' ಅಲ್ಲವೇ? ಆದ ಕಾರಣ ದೇವರು ಎನ್ನುವುದು ಮನುಷ್ಯನು ತನಗೆ ತಾನು ಗೊಂದಲಕ್ಕೆ ಕಾರಣ ಮಾಡಿಕೊಂಡಿರುವ ವಿಷಯವಲ್ಲವೆ?" ಎಂದು ಪ್ರಶ್ನೆ ಹಾಕಿದರು. ಇದನ್ನು ಆಧಾರವಾಗಿಟ್ಟುಕೊಂಡು ಮಾಸ್ತಿಯವರು "ಧರ್ಮ ಸಂರಕ್ಷಣೆ" ಎಂಬ ಶೀರ್ಷಿಕೆಯಲ್ಲಿ ಒಂದು ಅಂಕಣ ಬರಹವಾಗಿ 'ಕನ್ನಡ ಪ್ರಭ' ದಿನಪತ್ರಿಕೆಯಲ್ಲಿ (೧೯೮೨) ೧೮ ವಾರಗಳ ಕಾಲ ಉತ್ತರಿಸಲು ಪ್ರಯತ್ನಿಸಿದ್ದಾರೆ.

ಈ ಲೇಖನದ ತುಂಬಾ ಅನೇಕ ಪ್ರಶ್ನೆಗಳ ಸರಮಾಲೆ ಇದೆ. ಆದುದರಿಂದ ಪ್ರಶ್ನೆಗೆ ಪರ್ಯಾಯವಾದ ಸೂಕ್ತಪದ 'ದೇವರು' ಎನ್ನಬಹುದೇನೊ! ವಿಚಾರವಾದಿಗಳೂ ಗಾಂಧಿವಾದಿಗಳೂ ಆದ ದಿ.ಹೆಚ್.ನರಸಿಂಹಯ್ಯನವರ ಕೋಣೆಯಲ್ಲಿ ಪ್ರಶ್ನಾರ್ಥಕ ಚಿನ್ಹೆಯೆ ಗೋಡೆಯನ್ನು ಅಲಂಕರಿಸಿತ್ತು. ಅದು ಅವರು ಆರಾಧಿಸುತ್ತಿದ್ದ ಫೋಟೋ ಆಗಿರಲೂಬಹುದು. ಪ್ರತಿಯೊಂದನ್ನೂ ಪ್ರಶ್ನಿಸಿ ಅರ್ಥದಿಂದ ಸಂತೃಪ್ತವಾಗಬೇಕೆನ್ನುವುದು ಹೆಚ್.ಎನ್. ಅವರ ಅಭಿಪ್ರಾಯವೂ ಹೌದು. ಪ್ರಶ್ನಿಸಿ ನೋಡುವ ತತ್ತ್ವವೇ ವಿಜ್ಞಾನವೂ ಆಗಿದೆ. ವಿಜ್ಞಾನಕ್ಕೆ ಮಣಿಯದ ವೇದಾಂತವು ವಿಜ್ಞಾನವನ್ನು ಸುಲಭವಾಗಿ ಜಿಜ್ಞಾಸೆಗೆ ಗುರಿಪಡಿಸುತ್ತದೆ. ವೇದಾಂತ ಎನ್ನುವುದು ಜ್ಞಾನದ ಕೊನೆಗೆ ಸಿಗುವ ಉತ್ತರ, ಅದೇ ದೇವರು ಎನ್ನುವ ನಂಬಿಕೆಯೂ ಇದೆ.

ದೇವರು ಎಂದರೆ ಪ್ರಶ್ನೆಗಳ ಬೆನ್ನೇರಿ ಅರ್ಥಗಳ ಹುಡುಕಾಟದಲ್ಲಿ ತೊಡಗುವ ಧ್ಯಾನದ ಗುರಿಯ ಪ್ರತಿಮೆಯೂ ಆಗಿರಬಹುದು. ದೇವರ ಪ್ರತಿಮೆಯನ್ನು ಕಲ್ಪಿಸಿಕೊಳ್ಳಲು ಪ್ರತಿಯೊಬ್ಬರಿಗೂ ತಮ್ಮದೇ ಆದ ಸ್ವಾತಂತ್ರ್ಯವಿದೆ. ಹಾಗಾಗಿ ಅಗಣಿತ ದೇವರುಗಳು ಜೀವಂತವಾಗಿವೆ. ಶ್ರೀ ರಾಮಕೃಷ್ಣ ಪರಮಹಂಸರು ಹೇಳುವಂತೆ: ಒಂದು ಉಪ್ಪಿನಗೊಂಬೆ ಸಮುದ್ರವನ್ನು ಅಳೆಯಲು ಹೊರಡುತ್ತದೆ. ಉಪ್ಪಿನಗೊಂಬೆ ಸಮುದ್ರದೊಳಗೆ ಕರಗಿ ಲೀನವಾಗುತ್ತದೆ. ಅಂತೆಯೇ ದೇವರನ್ನು ತಿಳಿಯಲು ಪ್ರಯತ್ನಪಡುವ ಮನುಷ್ಯನ ಪಾಡೂ ಅಷ್ಟೆ – ಎನ್ನುತ್ತದೆ ಈ ತತ್ವ.

ಕವಿ ಬಿ.ಆರ್.ಲಕ್ಷ್ಮಣರಾವ್ ತಮ್ಮ ಒಂದು ಭಾವಗೀತೆಯಲ್ಲಿ

ದೇವರೇ, ಅಗಾಧ ನಿನ್ನ ಕರುಣೆಯ ಕಡಲು. ನನಗೆ ಸಾಧ್ಯವೆ ಅದರ ಆಳ ಅಳೆಯಲು!

ಸಿಂಹಕೊಂದು ಜಿಂಕೆ ಇಟ್ಟೆ, ನರನಿಗೆ ನರನನ್ನೆ ಬಿಟ್ಟೆ ಬೇಟೆಯಾಡಲು
ಅಲ್ಲದೆ, ಮನುಷ್ಯನಿಗೆ ಬುದ್ಧಿ ಕೊಟ್ಟೆ ನಿನ್ನನ್ನೇ ಅಲ್ಲಗಳೆಯಲು!

ಎಂದು ದೇವರಲ್ಲಿ ಅಡಗಿರುವ ಆಳವನ್ನು ಮುಳುಗಿ ನೋಡಲು ಸಾಧ್ಯವಿಲ್ಲವೆಂದು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ಹಾಗೆಯೆ ಶಿವರಾಮಕಾರಂತರು ನಮ್ಮ ಅಳತೆಯನ್ನು ಮೀರಲಾಗದ ದೇವರು ಎಂಬ ಲೇಖನದಲ್ಲಿ ಮನುಷ್ಯ ಬೆಳೆದಷ್ಟು ಎತ್ತರಕ್ಕೆ ಪ್ರತಿಯಾಗಿ ದೇವರು ಸರಿಸಮಾನವಾಗಿ ಕಾಣುತ್ತಿರುತ್ತಾನೆ ಎಂದು ಸಮೀಕರಿಸಿ ಹೇಳಿದ್ದಾರೆ.

ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮುಳ್ಳುಗಳ ಗುಡಿಯೊಳಗೆ.
ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸದಾದೆನು ನಮ್ಮೊಳಗೆ

ಇವು ಜಿ.ಎಸ್. ಶಿವರುದ್ರಪ್ಪನವರ 'ಅನ್ವೇಷಣೆ' ಕವಿತೆಯ ಸಾಲುಗಳು. ಕಲ್ಲು ಮುಳ್ಳುಗಳ ಗುಡಿಯೊಳಗೆ ದೇವರು ಇಲ್ಲವೆಂದು ಮನುಷ್ಯ ಮನುಷ್ಯರ ನಡುವೆ ಇರಬೇಕಾದ ಪ್ರೀತಿ ಸ್ನೇಹಗಳನ್ನೆ ದೇವರೆಂದು ಪರಿಭಾವಿಸಿದ್ದಾರೆ. ಹೀಗೆಂದಲ್ಲಿ ಪ್ರೀತಿ ಮತ್ತು ಸ್ನೇಹ ಎಂಬ ಪದಗಳಿಗೆ ವಿಶಾಲವಾದ ಅರ್ಥವ್ಯಾಪ್ತಿ ಬೆಳೆದುಕೊಳ್ಳುತ್ತದೆ. ನಿರ್ಮಲವಾದ ಪ್ರೀತಿ ಮತ್ತು ಸ್ನೇಹಗಳ ನಿಜರೂಪವನ್ನು ಹುಡುಕಬೇಕಾಗುತ್ತದೆ.

ವಿಚಾರಪರ ವಿದ್ವಾಂಸರಾಗಿದ್ದ ಎ.ಎನ್.ಮೂರ್ತಿರಾವ್ ಅವರ 'ದೇವರು' ಪುಸ್ತಕ ಓದುಗರ ನಡುವೆ ಆರೋಗ್ಯಕರವಾದ ವಿಮರ್ಶೆಗೆ ಒಳಗಾಗಿತ್ತು. ಅಷ್ಟೇ ಜನಮನ್ನಣೆಯನ್ನೂ ಗಳಿಸಿಕೊಂಡಿತು. ಕನ್ನಡದ ಶ್ರೇಷ್ಠ ಪ್ರಶಸ್ತಿಯಾದ ಪಂಪ ಪ್ರಶಸ್ತಿಯನ್ನೂ ಈ ಪುಸ್ತಕ ಅವರಿಗೆ ತಂದುಕೊಟ್ಟಿತು. 'ದೇವರು' ಪುಸ್ತಕದ ಒಂಬತ್ತನೇ ಅಧ್ಯಾಯದ ಶೀರ್ಷಿಕೆ 'ದೇವರು ಇದ್ದಾನೆಯೆ?' ಎಂಬುದು. ಅಲ್ಲಿ ದೇವರ ಅಸ್ತಿತ್ವವನ್ನು ಕುರಿತು ಚರ್ಚಿಸಲಾಗಿದೆ. ಆ ಅಧ್ಯಾಯವನ್ನು ನಾನು ಗ್ರಹಿಸಿರುವಂತೆ; ದೇವರು ಎಂಬ ನಂಬಿಕೆ ಅಥವಾ ಅಭಿಮತ ನೆಲದ ಮೇಲೆ ಒಂದೇ ಆಗಿರದೆ ಅದು ಪ್ರಾಂತದಿಂದ ಪ್ರಾಂತಕ್ಕೆ ಬದಲಾಗಿರುತ್ತದೆ; ಕಾಲದಿಂದ ಕಾಲಕ್ಕೆ ಆ ಅಭಿಪ್ರಾಯ ಅಥವಾ ಅಭಿಮತವೂ

ಸಹ ಬದಲಾಗಿರುವ ನಿದರ್ಶನಗಳನ್ನು ಸಮರ್ಥವಾಗಿ ನೀಡಿದ್ದಾರೆ. ಉದಾಹರಣೆಗೆ: ಯೇಸುವಿನ ಬಗ್ಗೆ ಜನರಲ್ಲಿದ್ದ ನಂಬಿಕೆ ಕಾಲಾನುಕ್ರಮೇಣ ಬದಲಾಗಿ ಕ್ರೈಸ್ತಧರ್ಮ ಭಿನ್ನಾಭಿಪ್ರಾಯಕ್ಕೆ ಒಳಗಾಗಿ ಹೋಳಾಗಿರುವುದನ್ನು ಸೂಚಿಸಿದ್ದಾರೆ. ಇದೇ ರೀತಿ ಎಲ್ಲ ಧರ್ಮಗಳಲ್ಲೂ ಭಿನ್ನಮತದ ಕವಲುಗಳನ್ನು ಗುರುತಿಸಿದ್ದಾರೆ. ಕರ್ನಾಟಕದ ದೇವರು ಬೇರೊಂದು ರಾಜ್ಯದ ಜನರಿಗೆ ತಿಳಿಯದೇ ಇರಬಹುದು. ಹಾಗೆಯೇ ಬೇರೊಂದು ಕಡೆ ಪ್ರಚಲಿತವಾಗಿರುವ ದೇವರು ನಮಗೆ ತಿಳಿಯದೆಯೇ ಇರಬಹುದು. ಸೃಷ್ಟಿಯ ಕರ್ತ ಒಬ್ಬನಾಗಿದ್ದ ಪಕ್ಷದಲ್ಲಿ ಒಂದೇ ನಂಬಿಕೆ, ಒಂದೇ ಅಭಿಮತ ಎಲ್ಲೆಲ್ಲೂ ಇರಬೇಕಾಗಿತ್ತು – ಎಂದು ಮೂರ್ತಿರಾಯರು ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ. ಆದುದರಿಂದ ದೇವರು ಎಂಬ ಕಲ್ಪನೆಯನ್ನು ಒಂದು ನಿರ್ದಿಷ್ಟ ಧಾರ್ಮಿಕ ಪ್ರಾಂತದಲ್ಲಿ ಒಬ್ಬ ಪ್ರಭಾವಶಾಲಿ ಧರ್ಮಪ್ರಚಾರಕನ ಪ್ರಾಬಲ್ಯದಿಂದ ಸೃಷ್ಟಿಯಾದ ಆಧ್ಯಾತ್ಮಿಕ ಕಲ್ಪನೆ ಎಂದೂ ಸಹ ಭಾವಿಸುವುದು ಸಾಧ್ಯ.

ಇಸ್ಲಾಂ ಧರ್ಮದಲ್ಲಿ ಶಿಯಾ, ಸುನ್ನಿ; ಕ್ರೈಸ್ತ ಧರ್ಮದಲ್ಲಿ ರೋಮನ್ ಕ್ಯಾಥೊಲಿಕ್, ಪ್ರಾಟೆಸ್ಟೆಂಟ್, ಬ್ಯಾಪ್‌ಟಿಸ್ಟ್; ಹೀಗೆ ಎಲ್ಲ ಧರ್ಮಗಳಲ್ಲೂ ಪೂಜಿಸುವ, ಪ್ರಾರ್ಥಿಸುವ ಮಾರ್ಗಗಳಲ್ಲಿ ಭಿನ್ನತೆಗಳು ಸಾಮಾನ್ಯವಾಗಿ ಕಾಣಲು ಸಿಗುತ್ತವೆ.

ನಿಸರ್ಗದ ವಿಕೋಪಗಳಿಂದ ಇಲ್ಲವೆ ಅಲ್ಲಿನ ನಿಗೂಢಗಳಿಂದ ಭಯಗ್ರಸ್ತನಾದ ಮನುಷ್ಯನು ಅದರ ಅಧ್ಯಯನದಲ್ಲಿ ತೊಡಗಿದ್ದಾನೆ. ಹಗಲು.ಇರುಳು, ಪಂಚಭೂತಗಳು ಹೀಗೆ ಮೂವತ್ತಮೂರು ಕೋಟಿಗಳವರೆಗೂ ತನ್ನ ಅರಿವನ್ನು ಹರಿಯಲು ಬಿಟ್ಟಿದ್ದಾನೆ. ಒಂದೊಂದರ ಮಹತ್ವಕ್ಕೂ ಮಣಿದು ನಿಲುಕದ ನೋಟಕ್ಕೆ, ಮನಸ್ಸಿನ ವೇದಾಂತಕ್ಕೆ 'ದೇವರು' ಎಂದು ಮಸುಕಾಗಿ ಕರೆದುಕೊಂಡು ಸಂತೃಪ್ತನಾಗಿದ್ದಾನೆ.

ಪಂಚಭೂತಗಳ ಆಶ್ರಯದಲ್ಲಿ ಬದುಕುವ ಮನುಷ್ಯ ಅದು ಮೇಲು, ಇದು ಕೀಳು, ಎಂಬ ತಾರತಮ್ಯವನ್ನು ಮನಸ್ಸಿನಲ್ಲಿ ಬೆಳೆಸಿಕೊಂಡು ಕುಬ್ಜನಾಗಿಯೂ ಮೆರೆಯುತ್ತಿದ್ದಾನೆ.

ನಮ್ಮೊಳಗಿನ ನಮ್ಮ ಮೆದುಳು, ಕರುಳು, ಅಂಗಾಂಗಗಳು ನಮ್ಮ ಕಣ್ಣುಗಳಿಗೇ ಕಾಣುವುದಿಲ್ಲ. ಅವುಗಳನ್ನು ಕಾಣಲು ಪ್ರಯತ್ನಮಾಡಿ ಸಫಲರಾದರೂ ಅದರೊಳಗಿನ ಜೀವಚೈತನ್ಯ ಕಾಣಲು ಸಾಧ್ಯವಾಗದು. ಒಳಗೆ, ಹೊರಗೆ ಸರ್ವಾಂತರ್ಯಾಮಿಯಾದ ದೇವರನ್ನು ಕಾಣುವ ಸಾಮರ್ಥ್ಯ ಮುಷ್ಟಿಗಾತ್ರದ ಮೆದುಳಿಗೆ ಇದೆಯೇ? ಎಂಬ ಪ್ರಶ್ನೆಯನ್ನು ಆ ಮೆದುಳೇ ಕೇಳಿಕೊಳ್ಳುತ್ತಿದೆ.

ಹೀಗೆ ದೇವರ ಅಥವಾ ನಿಸರ್ಗದ ಶಿಶುವಾದ ಮಾನವನು ತನ್ನ ಅಸ್ತಿತ್ವದ ಮೂಲಾಧಾರವಾದ ಚೈತನ್ಯವನ್ನು ತಿಳಿದುಕೊಳ್ಳುವ ತವಕದಲ್ಲಿ ನಿರಂತರವಾಗಿ ತೊಡಗಿಕೊಂಡಿದ್ದಾನೆ. (ಸಾಭಾರ : ಉತ್ಥಾನ)

* * *

ಅಕ್ಷರ ವ್ಯಾಪಾರದಲ್ಲಿ ವಿಶ್ವಬ್ಯಾಂಕಿನ ಪಾತ್ರ

ಎ.ಕೆ.ನಂದಾವರ

ಅಪತ್ಯ ಮತ್ತು ಶೋಷಣೆಯೇ ಒಡಲಲ್ಲಿಟ್ಟು ಮಾರಕ ಶಕ್ತಿಯಾಗಿ ಬೆಳೆದಿರುವ ಸಾಮ್ರಾಜ್ಯಶಾಹಿತ್ವವು ಇಂದಿನ ದಿನಗಳಲ್ಲಿ ಅಗೋಚರವಾಗಿದ್ದರೂ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ನೆಲೆಯೂರಿದಂತೆಯೇ ಶಿಕ್ಷಣ ರಂಗದಲ್ಲಿಯೂ ತನ್ನ ಅಜೆಂಡಾಗಳೊಂದಿಗೆ ಅದು ಬಿಗಿಹಿಡಿದ ಮುಷ್ಠಿ ಇನ್ನೂ ಸಡಿಲಗೊಂಡಿಲ್ಲ. ತಲೆತಲಾಂತರಗಳಿಂದ ಸಾಗಿ ಬಂದಿದ್ದ ಶಿಕ್ಷಣದ ಪರಮಲಕ್ಷ್ಯ ಮತ್ತು ಮೌಲ್ಯಗಳು ಶಿಥಿಲಗೊಂಡಿರುವುದೇ ಇದಕ್ಕೆ ಸಾಕ್ಷಿ. ಶಿಕ್ಷಣದ ಮೂಲ ಧ್ಯೇಯಗಳೆಲ್ಲವೂ ತಿದ್ದಿ ತೀಡಲ್ಪಟ್ಟು, ಸ್ವಾವಲಂಬನೆ, ಸ್ವಾಭಿಮಾನ, ಪೌರಪ್ರಜ್ಞೆಗಳೆಂಬ ಶೈಕ್ಷಣಿಕ ಲಕ್ಷ್ಯಗಳು ಇಂದು ಅಪ್ರಧಾನವಾಗಿ ಮಾರ್ಪಟ್ಟಿರುವುದು ಸುಳ್ಳಲ್ಲ.

'ಲಾಭದಾಯಕ' ಶಿಕ್ಷಣವೆಂಬ ಪರಿಕಲ್ಪನೆಯು ವ್ಯಾಪಕವಾಗುವುದರೊಂದಿಗೆ 'ಗರಿಷ್ಠಲಾಭ'ಗಳಿಸಬಲ್ಲ ಶಿಕ್ಷಣವೇ ಶ್ರೇಷ್ಠ ಶಿಕ್ಷಣವೆಂಬ ಸನ್ನಿವೇಶ ನಿರ್ಮಾಣವಾಗಿ, ಶಿಕ್ಷಣಕ್ಕೆ ಹೊಸ ವ್ಯಾಖ್ಯೆ ಕೊಡುವಂತಾಗಿದೆ. ವಿದ್ಯೆ ಪ್ರಸರಣ ಎಂಬುದರಿಂದ ವಿದ್ಯೆ ಮಾರಾಟ ಎಂಬುದರೆಡೆಗೆ ಪರಿಸ್ಥಿತಿ ಬದಲಾಗಿದೆ. ನಾವು 'ಅಭಿವೃದ್ಧಿ' ಎಂದು ಭ್ರಮಿಸಿದ್ದೂ ಇದೇ ಬದಲಾವಣೆಯನ್ನೇ. 'ವಿದ್ಯೆ'ಯನ್ನು ಮಾರಾಟಕ್ಕಿಡುವುದರೊಂದಿಗೆ ವಿದ್ಯೆಯನ್ನು ಬೆಲೆಕೊಟ್ಟು ಖರೀದಿಸುವ ಕಾಯಕವೂ ಇಂದು ಬಹು ವ್ಯಾಪಕವಾಗಿ ಬೆಳೆದಿದೆ. ಶಿಕ್ಷಣ ಒಂದು ಲಾಭದಾಯಕ ವ್ಯವಸ್ಥೆಯೆಂದರಿತ ವಾಣಿಜ್ಯ ಜಗತ್ತಿನ ಶಕ್ತಿಗಳು ಶಿಕ್ಷಣದಲ್ಲಿ ಬಂಡವಾಳ ತೊಡಗಿಸಲು ಆರಂಭಿಸಿ ಲಾಭ-ನಷ್ಟವನ್ನು ಲೆಕ್ಕ ಹಾಕಲು ಮುಂದಾಗಿವೆ. ಈ ಎಲ್ಲ ಬೆಳವಣಿಗೆಯಿಂದಾಗಿ ಶಿಕ್ಷಣವೂ ವಾಣಿಜ್ಯ ರಂಗದ ಬಿಸಿ ಅಪ್ಪುಗೆಯಿಂದಾಗಿ ತನ್ನ ಉದ್ದೇಶದಿಂದ ದೂರ ಸರಿಯುತ್ತಿದೆಯಷ್ಟೆ.

ಇಂತಹ ವ್ಯತಿರಿಕ್ತ ಬೆಳವಣಿಗೆಗೆ ಕಾರಣ ಮತ್ತು ಪರಿಣಾಮಗಳನ್ನು ಹುಡುಕುತ್ತಾ ಹೋದರೆ ಸಿಗುವ ಅಂಶಗಳ ಬಗ್ಗೆ ನಾವು ಚರ್ಚಿಸಬೇಕಾಗುತ್ತದೆ. ಆರ್ಥಿಕ ಆಸಕ್ತಿಗಳಲ್ಲಿ ಮಾತ್ರ ಕೈಯ್ಯಾಡಿಸುತ್ತಿದ್ದ, ಕೈಯ್ಯಾಡಿಸಬೇಕಾಗಿದ್ದ 'ವಿಶ್ವ ಬ್ಯಾಂಕ್' ಶಿಕ್ಷಣ ಕ್ಷೇತ್ರದಲ್ಲಿಯೂ ಹಸ್ತಕ್ಷೇಪ ಮಾಡಲಾರಂಭಿಸಿರುವುದು ಇತ್ತೀಚೆಗಿನ ಕಾಲದ ಅತಿ ದೊಡ್ಡ ದುರಂತವೆನ್ನದೆ ವಿಧಿಯಿಲ್ಲ. 'ವಿಶ್ವ ಬ್ಯಾಂಕ್' ಎಂಬುದೊಂದು ಇರುವುದೇ 'ಶೋಷಣೆ' ಮಾಡಲು ಎಂದು ಹೇಳುವುದು ಸರಿಯಲ್ಲವಾದರೂ, ಅದು ಶೋಷಣೆ ಮಾಡುತ್ತಿದೆ ಎಂಬ ಬುದ್ಧಿಜೀವಿಗಳವಾದ ಸರಣಿಗಳನ್ನು ಅತಿಬುದ್ಧಿ ಎಂದು ವ್ಯಂಗ್ಯ ಮಾಡಿ ಸುಮ್ಮನಾಗುವಂತಿಲ್ಲ. ಯಾಕೆಂದರೆ ವಿಶ್ವ ಬ್ಯಾಂಕಿನ ನೀತಿಗಳು ಮತ್ತು ಅವುಗಳ ಪರಿಣಾಮಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ 'ಬುದ್ಧಿಜೀವಿ'ಗಳ ವಾದದಲ್ಲಿಯೂ ಹುರುಳಿದೆ ಎಂದು ತಿಳಿಯದಿರದು. ಉದಾಹರಣೆ: ನಾಡಿನ ಚಿಂತಕರೋರ್ವರ ವಿಶ್ಲೇಷಣೆಯನ್ನು ಪರಿಶೀಲಿಸಿದರೆ, ೧೯೯೯-೨೦೦೦ರ ಅವಧಿಯಲ್ಲಿ ಕರ್ನಾಟಕ ಸರಕಾರವು ವಿಶ್ವ ಬ್ಯಾಂಕಿನಿಂದ ಪಡೆದ ಸಾಲದ ಮೊತ್ತ ಸುಮಾರು ಒಂದು ಶತಕೋಟಿ ಡಾಲರ್. ಅಂದರೆ ಅಂದಿನ ವಿನಿಮಯ ಲೆಕ್ಕದಲ್ಲಿ ಸುಮಾರು ೮೮೦೦ ಕೋಟಿ ರೂ.

ಅಷ್ಟೂ ಸಾಲವನ್ನು ವಿಶ್ವ ಬ್ಯಾಂಕ್ ಒಮ್ಮೆಲೇ ನೀಡಲಿಲ್ಲ. ಪ್ರತಿವರ್ಷ ೨೫೦

ದಶಲಕ್ಷ ಡಾಲರ್‌ಗಳಂತೆ ನೀಡುವುದರೊಂದಿಗೆ ವಿಶ್ವ ಬ್ಯಾಂಕ್‌ನ ಒಂದು ನಿರ್ದೇಶನವಿದೆ. ಅದನ್ನೇ 'ಮಧ್ಯಮಾವಧಿ ವಿತ್ತೀಯ ಯೋಜನೆ' ಎನ್ನುವುದು. ಈ ಯೋಜನೆಯ ಅವಧಿ ನಾಲ್ಕು ವರ್ಷಗಳು. ಈ ಅವಧಿಯಲ್ಲಿ ನಮ್ಮ ಸರಕಾರವು ಯಾವ ಕ್ಷೇತ್ರದಲ್ಲಿ ಎಷ್ಟು ಹಣ ವೆಚ್ಚ ಮಾಡಬೇಕು ಎಂದು ಈ ಯೋಜನೆ ನಿರ್ದೇಶಿಸುತ್ತದೆ. ಪ್ರತಿ ವರ್ಷ ೨೫೦ ದಶಲಕ್ಷ ಡಾಲರ್ ಕೊಡುವಾಗ ವಿಶ್ವ ಬ್ಯಾಂಕ್‌ನ ಈ ನಿರ್ದೇಶನಗಳನ್ನು ಸರಕಾರವು ಪಾಲಿಸಿದೆಯೇ ಎಂದು ಅದು ಖಾತರಿಪಡಿಸಿಕೊಳ್ಳುತ್ತದೆ ಕೂಡಾ! ಒಟ್ಟಿನಲ್ಲಿ ನಮ್ಮ ದೇಶದ ರಾಜ್ಯಗಳ ಖರ್ಚು-ವೆಚ್ಚಗಳೆಲ್ಲವೂ ವಿಶ್ವ ಬ್ಯಾಂಕ್‌ನ ಅಣತಿಯಂತೆ ನಡೆಯುತ್ತವೆ ಎಂದಾಯಿತಲ್ಲವೇ?

೨೦೦೨ರಲ್ಲಿ ಇದೇ ವಿಶ್ವ ಬ್ಯಾಂಕಿನ ಇನ್ನೊಂದು ನಿರ್ದೇಶನಗಳ ಕಂತೆ ಪ್ರಸ್ತುತಪಡಿಸಿದೆ. ಅದೇ ವಿತ್ತೀಯ ಸುಧಾರಣಾ ಶಾಸನ. ಈ ಶಾಸನದ ಪ್ರಕಾರ 'ಪ್ರತಿ ವರ್ಷ ಸರಕಾರಗಳು ಮಂಡಿಸುವ ವಾರ್ಷಿಕ ಬಜೆಟ್ ಎಂಟಿಎಫ್‌ಪಿಯಲ್ಲಿ ವಿಷದವಾಗಿರುವ ಮಧ್ಯಮಾವಧಿ ಯೋಜನೆಗೆ ಬದ್ಧವಾಗಿರತಕ್ಕದ್ದು. ಈ ನಿರ್ದೇಶನಗಳು ಎಂಬ ಹೇರಿಕೆಯು ಶಿಕ್ಷಣ ಕ್ಷೇತ್ರವನ್ನು ಹೊರತುಪಡಿಸುವುದಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ ತಾನೆ? ಇನ್ನು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿಶ್ವ ಬ್ಯಾಂಕಿನ ಆಶಯವೇನೆಂದರೆ, ಶಿಕ್ಷಣಕ್ಕೆ ಸಂಬಂಧಿಸಿದ ಸಬ್ಸಿಡಿಗಳನ್ನು ತೆಗೆದು ಹಾಕಬೇಕು. ಅಂದರೆ ರದ್ದುಗೊಳಿಸಬೇಕು. ಮಕ್ಕಳ ಶೈಕ್ಷಣಿಕ ವೆಚ್ಚವನ್ನು ಹೆತ್ತವರೇ ನಿರ್ವಹಿಸಬೇಕು ಎನ್ನುವ ವಿಶ್ವ ಬ್ಯಾಂಕ್, ಮಕ್ಕಳ ಜನನಕ್ಕೆ ಕಾರಣರಾದವರೇ ಅವರನ್ನು ಬೆಳೆಸಲು ಜವಾಬ್ದಾರರು ಎಂಬ ತತ್ವ ಪಾಲಿಸಲು ಹೊರಟಿದೆ. ಈ ನೀತಿಗಳು ಆರ್ಥಿಕ ಶ್ರೀಮಂತರನ್ನು ಶೈಕ್ಷಣಿಕವಾಗಿಯೂ ಶ್ರೀಮಂತಗೊಳಿಸುವುದಕ್ಕೆ ಪ್ರೇರಣೆಯಲ್ಲದೇ ಬಡವರು ಶೈಕ್ಷಣಿಕವಾಗಿಯೂ ಬಡವರಾಗುತ್ತಾ ಹೋಗಲು ಕಾರಣವಾಗುತ್ತದೆ. ವಿಶ್ವ ಬ್ಯಾಂಕ್ ಶೋಷಣೆ ಮಾಡುತ್ತಿದೆ ಎನ್ನುವುದಕ್ಕೆ ಇಷ್ಟು ಪುರಾವೆ ಸಾಕಲ್ಲವೇ?

ವಿಶ್ವ ಬ್ಯಾಂಕ್‌ನ ನಿರ್ದೇಶನಗಳನ್ನು ಪಾಲಿಸುವ ಭಾಗವಾಗಿಯೇ ಇಂದು ನಮ್ಮ ಸರಕಾರಗಳು ಕೃಷಿ, ಕೈಗಾರಿಕೆಗಳಂತಹ ಆರ್ಥಿಕ ಕ್ಷೇತ್ರಗಳ ಜತೆಗೆ ಶಿಕ್ಷಣದಂತಹ ಸೇವಾ ಕ್ಷೇತ್ರಗಳಲ್ಲಿಯೂ ಖಾಸಗಿ ಬಂಡವಾಳವನ್ನು ಉತ್ತೇಜಿಸುತ್ತಿವೆ. ಈ ರೀತಿಯಾಗಿ ಇಡೀ ವ್ಯವಸ್ಥೆಯನ್ನು ಅಭಿವೃದ್ಧಿಯ ಹೆಸರಿನಲ್ಲಿ ಹಂಗಿನ ಅರಮನೆಗೆ ನಾವೇ ಉದ್ದೇಶಪೂರ್ವಕ ತಳ್ಳಿ ಬಿಟ್ಟಿದ್ದೇವೆ. ಇಲ್ಲಿ ಯಾವ ಪಕ್ಷವೇ ಅಧಿಕಾರಕ್ಕೆ ಬರಲಿ; ಈ ಹಂಗಿನ ಅರಮನೆ ಯನ್ನೇ ಇನ್ನಷ್ಟು ಅಲಂಕರಿಸಿ ಅದರೊಳಗೇ ಮುದುಡಿ ಕುಳಿತು ಕೊಳ್ಳಲು ಪ್ರಯತ್ನಿಸುತ್ತವೆಯೇ ಹೊರತು ಅದರಿಂದ ಹೊರಬರುವ ಪ್ರಯತ್ನ ಮಾಡವು! 'ಅಭಿವೃದ್ಧಿ' ಎಂಬ ಪದ ದೊಡ್ಡ ಅಡ್ಡವಾಗಿದೆಯಷ್ಟೆ. ಅಂತಹ ಹಂಗಿನ ಅರಮನೆಯಲ್ಲಿ ಶಿಕ್ಷಣವು ವ್ಯಾಪಾರದ ಸರಕಾಗದೇ ಇನ್ನೇನು ಆಗಲು ಸಾಧ್ಯ? ಅದೂ ಬಡವರು ಕೊಂಡುಕೊಳ್ಳಲಾಗದ ಬೆಲೆ ಬಾಳುವ ಸರಕು.

ಇದರ ಮುಂದುವರಿದ ಅಂಶವೆಂಬಂತೆ, ಹಣ ಕಬಳಿಸಲು 'ನ್ಯಾಯಬದ್ಧ' ದಂಧೆಯನ್ನೇ ಗುರಿಯಾಗಿಸಿರುವ ಖಾಸಗಿ ಶಿಕ್ಷಣ ಸಂಸ್ಥೆಗಳದ್ದು (ಕೆಲವೊಂದು ಧಾರ್ಮಿಕ ಕೇಂದ್ರ, ವ್ಯಕ್ತಿಗಳು ಸೇವಾ ಮನೋಭಾವದಿಂದ ನಡೆಸುವ ಅತ್ಯಪರೂಪದ ಸಂಸ್ಥೆಗಳನ್ನು ಹೊರತುಪಡಿಸಬಹುದೇನೋ) ಅಕ್ಷರ ಉದ್ಯಮಗಳಷ್ಟೆ. ಈ ಎಲ್ಲ ಶೋಷಣೆಗಳೊಳಗೆ ಸಾಮಾನ್ಯವಾಗಿ ಚರ್ಚೆಯಾಗದ ಇನ್ನೊಂದು ಅಂಶವಿದೆ. ಅದೇನೆಂದರೆ ಕೆಲವು ಖಾಸಗಿ

ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವವರಿಗೆ ಸರಕಾರ ನಿಗದಿಪಡಿಸಿದ ಕನಿಷ್ಠ ವೇತನವನ್ನೂ ನೀಡಲಾಗುತ್ತಿಲ್ಲ. ಇದೇ ಕಾರಣಕ್ಕೆ ಇರಬಹುದು 'ಶಿಕ್ಷಕ ವೃತ್ತಿ'ಯಿಂದ ಈಗೀಗ ಪುರುಷ ಸಮಾಜ ದೂರ ಸರಿಯುತ್ತಿರುವುದು. ಶಿಕ್ಷಕಿಯರನ್ನು ಜುಜುಬಿ ವೇತನ ಕೊಟ್ಟು ದುಡಿಸಿ, ಪ್ರಾಮಾಣಿಕ ಸೇವೆಯನ್ನು ಪಡೆಯಬಹುದೆಂಬುದು ಶಿಕ್ಷಣೋದ್ಯಮಗಳ ನಂಬಿಕೆ. ಅದಕ್ಕೆ ಹೊಂದಿಕೊಂಡು 'ಶಿಕ್ಷಕಿ'ಯರಾಗಿ ಮಹಿಳೆಯರು ದುಡಿಯುತ್ತಿದ್ದಾರೆ ಕೂಡಾ.

ಈ ಶಿಕ್ಷಕಿಯರು ಕನಿಷ್ಠ ವಿದ್ಯಾರ್ಥಿಗಳ ಮುಂದೆ 'ಶಿಕ್ಷಕಿ'ಯಾಗಿ ನಿಲ್ಲಲು ಬೇಕಾದ, ಅದೆಷ್ಟು ಸಾದಾ ಸೀರೆಯನ್ನು ಖರೀದಿಸ ಬೇಕಾದರೂ ಮೂರ್‍ನಾಲ್ಕು ತಿಂಗಳ ವೇತನ ಬೇಕಾಗಬಹುದೇನೋ? ಬಸ್ ಟಿಕೆಟ್‌ಗೆ ತಿಂಗಳ ಅರ್ಧ ವೇತನ ಬೇಕಾಗಬಹುದು. ಈ ಮಟ್ಟದಲ್ಲಿಯೂ ಪ್ರಾಮಾಣಿಕ ಸೇವೆಯನ್ನು ಮಹಿಳೆಯರಿಂದ ಪಡೆಯುವ ಶಿಕ್ಷಣೋದ್ಯಮಗಳು ಈ ಸಮಾಜದಲ್ಲಿ ಬಹಳಷ್ಟು ಇದೆ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದೊಂದು ದಿನ ಶಿಕ್ಷಕ ವೃತ್ತಿಯಲ್ಲಿ ಪುರುಷರನ್ನು ಕಾಣುವುದೇ ದುಸ್ತರವಾಗಬಹುದು. ಇಂತಹ ದುರವಸ್ಥೆ ಒಂದೆಡೆಯಾದರೆ ಬಡ ವರ್ಗದವರು ತಮ್ಮ ಮಕ್ಕಳ ಬಗ್ಗೆ ಅದೆಂತಹ ಕನಸು ಕಂಡರೂ ಸರಕಾರ ನೀಡುವ ಉಚಿತ ಶಿಕ್ಷಣವೆಂಬ ಹುಳುಕಡ್ಡಿಗಳನ್ನಷ್ಟೇ ಅರಗಿಸಿ ತಾನು ಶಿಕ್ಷಿತ ಎಂದು ಆತ್ಮಾನಂದ ಪಡೆಯಬೇಕಷ್ಟೆ. ಒಟ್ಟಿನಲ್ಲಿ ಶಿಕ್ಷಣವೆನ್ನುವುದು ಉಳ್ಳವರ ಸ್ವತ್ತು, ಶಿಕ್ಷಣ ಸಂಸ್ಥೆಗಳೆನ್ನುವುದು ಉಳ್ಳವರ ಶಿವಾಲಯವಾಗಿದೆ.

ಇಂತಹ ದಿಕ್ಕು ತಪ್ಪಿದ ಶಿಕ್ಷಣ ವ್ಯವಸ್ಥೆಯ ಸುತ್ತಮುತ್ತ ಇನ್ನಷ್ಟು ಕಣ್ಣಾಡಿಸಿದರೆ, ಇನ್ನಷ್ಟು ಮತ್ತಷ್ಟು ಗೋಜಲುಗಳು ಎದುರಾಗುತ್ತವೆ. ನಗರಗಳಲ್ಲಿ ಹೆಜ್ಜೆಗೊಂದರಂತೆ ಅಲ್ಲಲ್ಲಿ ತಲೆಯೆತ್ತುತ್ತಿರುವ ಶಿಕ್ಷಕ ತರಬೇತಿ ಕೇಂದ್ರಗಳು, ಶಿಕ್ಷಣೋದ್ಯಮಿಗಳ ಲಾಭದಾಹದಿಂದಾಗಿ ಸಣ್ಣ ನಗರವೊಂದರಲ್ಲೇ ಹತ್ತಿಪ್ಪತ್ತು ಬಿಎಡ್, ಡಿಎಡ್ ಕಾಲೇಜುಗಳು ಕಂಡುಬರಲಾರಂಭಿಸಿವೆ. ಅವುಗಳಿಂದ ವರ್ಷ-ವರ್ಷವೂ ಹೊರ ಬರುತ್ತಿರುವ ಸಾವಿರಗಟ್ಟಲೆ ಶಿಕ್ಷಕರು (ಪುರುಷರ ಪ್ರಮಾಣ ತೀರಾ ಇಲ್ಲ ಎನ್ನುವಷ್ಟು ಕಡಿಮೆ) ಇವೆಲ್ಲವುಗಳೂ ಒಂದಕ್ಕೊಂದು ಪೂರಕವಾಗಿ ಲಾಭದಾಹಿಗಳ ದಾಹ ತಣಿಸುವುದಕ್ಕೆ ಹಾದಿ ಸುಗಮಗೊಳಿಸುತ್ತಿದೆ. ಇದರ ಪರಿಣಾಮ, ಭವಿಷ್ಯ ಮಾತ್ರ ಊಹಿಸಲಸಾಧ್ಯ.

ಮಾನವೀಯ ಮೌಲ್ಯಗಳಿಂದ ಸಂಬಂಧ ಕಡಿದು ಎಂದೋ ಬೇರ್ಪಟ್ಟಿರುವ ಈ ಶಿಕ್ಷಣ ವ್ಯವಸ್ಥೆಯು ಈ ಮಾನವ ಜಗತ್ತಿಗೆ ಎಂತಹ ಪಾಠ ಬೋಧಿಸೀತು? ಶಿಕ್ಷಣ ರಂಗದ ಪ್ರಮುಖ ಅಂಗಗಳೆನ್ನಬಹುದಾದ ಶಿಕ್ಷಕರು, ವಿದ್ಯಾರ್ಥಿಗಳು, ಹೆತ್ತವರು ಇವರ್‍ಯಾರಿಗೂ ಅರ್ಥ ಮಾಡಿಕೊಳ್ಳಲಾಗದ, ಜೀರ್ಣಿಸಲಾಗದಷ್ಟು ಕಗ್ಗಂಟ್ಟಾಗಿರುವ ವಿಶ್ವ ಬ್ಯಾಂಕಿನ ನೀತಿ-ನಿರೂಪಣೆಗಳು ಮತ್ತು ಅವುಗಳನ್ನು ಅನುಸರಿಸಿ ಬರುತ್ತಿರುವ ನಮ್ಮದೇ ಶಿಕ್ಷಣ ನೀತಿಗಳಿಂದಾಗಿ ಈ ಶಿಕ್ಷಣ ವ್ಯವಸ್ಥೆಯು ಇನ್ನೊಮ್ಮೆ ಬದಲಾಯಿಸಲಾಗದಷ್ಟು ಬದಲಾಗಿದೆ!

ಈ ವ್ಯವಸ್ಥೆಯ ವರ್ತಮಾನ, ಭವಿಷ್ಯದ ಬಗ್ಗೆ ಒಂದಷ್ಟು ಚಿಂತಿಸೋಣ. ಸದ್ಯಕ್ಕೆ ಚಿಂತಿಸುವುದಕ್ಕೆ ನಾವು ಸ್ವತಂತ್ರರು, ಅದಕ್ಕೆ ವಿಶ್ವ ಬ್ಯಾಂಕಿನ ಋಣ ಅಡ್ಡಿಯಾಗದು.

(ಸಾಭಾರ : ವಿಜಯ ಕರ್ನಾಟಕ)

* * *

ವೇದದಲ್ಲಿಯ ಮುತ್ತುಗಳು

⊙ *ವಿನೋಬಾ*

ಗೌಃ

ಗೀತೆಯಲ್ಲಿ ೭೦೦ ಶ್ಲೋಕಗಳಿವೆ, ಋಗ್ವೇದದಲ್ಲಿ ೧೦೫೫೨ ಮಂತ್ರಗಳಿವೆ. ಇದರ ಅರ್ಥ ವೇದವು ಗೀತೆಗಿಂತ ೧೫ರಷ್ಟು ದೊಡ್ಡದಾಗಿದೆ. ಇಷ್ಟು ಪ್ರಾಚೀನ ಗ್ರಂಥ ವೇದ! 'ಗೋ' ವಾಚಕ ಶಬ್ದ ವೇದದಲ್ಲಿ ಗೀತೆಗಿಂತ ಹೆಚ್ಚುಸಲ ಬಂದಿದೆ. ಶ್ರೀಕೃಷ್ಣ ಗೋವುಗಳ ಎಷ್ಟು ದೊಡ್ಡ ಭಕ್ತ! ಆದರೂ ಗೀತೆಯಲ್ಲಿ ಗೋ ಶಬ್ದ ಕೇವಲ ಎರಡು ಸ್ಥಳಗಳಲ್ಲಿ ಬಂದಿದೆ. ಕೃಷಿ-ಗೋರಕ್ಷ್ಯ-ವಾಣಿಜ್ಯಂ ಮತ್ತು ಧೇನೂನಾಮಸ್ಮಿಕಾಮಧುಕ್. ಗೀತೆಯಲ್ಲಿ ಗೋ ವಾಚಕ ಎರಡು ಶಬ್ದಗಳು ಬಂದಿದ್ದರೆ, ವೇದದಲ್ಲಿ ಮೂವತ್ತು ಬಾರಿ ಬರಬೇಕು. ಆದರೆ ವೇದದಲ್ಲಿ ಗೋ ವಾಚಕ ಶಬ್ದ ೭೪೨ ಬಾರಿ ಬಂದಿರುವುದನ್ನು ನಾನು ನೋಡಿದೆ. ಹೀಗೆ ಬಂದಾಗಲೆಲ್ಲಾ ಅದು ಅತ್ಯಂತ ಗೌರವಪೂರ್ವಕವಾಗಿ ಬಂದಿದೆ. ನಾನು ನನ್ನ ಪುಸ್ತಕದಲ್ಲಿ ಅದನ್ನು ಬರೆದಿಟ್ಟಿದ್ದೇನೆ. ಗೌ ೫೩೫, ಧೇನು ೧೨೭, ಅಧನ್ಯಾ ೧೮, ಉಸ್ರಾ ೨೯, ಉಸ್ರಿಮಾ ೩೩ = ಒಟ್ಟು ೭೪೨. ಆಗಾವೋ ಆಗ್ಮನ್ನುತ ಭದ್ರಮಕ್ರನ್. ಅರೆ! ಹಸು ಬಂದಿತು! ನಮಗೆ ಅತ್ಯಂತ ಕಲ್ಯಾಣವಾಯಿತು. ಪ್ರಾತಃಕಾಲದಿಂದ ಭಗವಾನ್ ಇಂದ್ರನ ಮುಂದೆ, ಹಸು ನಮ್ಮ ಭಾಗ್ಯ ಎಂದು ಹಾಡುತ್ತೇವೆ. ಅವೇ ಇಂದ್ರ, ಆದ್ದರಿಂದ ಹಸುಗಳ ಸೇವೆ ಎಂದರೆ ಭಗವಂತನ ಸೇವೆ.

ಅದ್ಧಿ ತೃಣಮಧ್ಯ ವಿಶ್ವದಾನೀಂ ಪಿಬ ಶುದ್ಧ ಮುದಕ ಮಾಚರಂತಿ. ಕುಡಿಯುವ ಶುದ್ಧವಾದ ನೀರು ಇದೆ – ಆದರೆ ಅದು ದೂರದಲ್ಲಿದೆ. ಆ ನೀರು ಹಸುಗಳಿಗೆ ದೊರೆಯುತ್ತದೆ. **ಗಾವೋ ವಿಶ್ವಸ್ಯ ಮಾತರಃ** – ಹಸುಗಳು ಇಡೀ ವಿಶ್ವದ ಮಾತೆಯರು. ತಾಯಂದಿರ ಜೊತೆ ಯಾವ ರೀತಿ ವ್ಯವಹಾರವಿರುತ್ತದೊ, ಅದೇ ರೀತಿ ಹಸುಗಳೊಂದಿಗೂ ಇರುತ್ತದೆ.

ಆ ಕಾಲದಲ್ಲಿ ಹಸುಗಳ ಸ್ಥಿತಿ ಹೇಗಿತ್ತು ಎಂಬುದರ ವರ್ಣನೆ ಮಾಡುತ್ತಾರೆ – **ಸಹಸ್ರಧಾರಾ ಪಯಸಾ ಗೌಃ** – ಸಾವಿರ ಧಾರೆಗಳ ಹಸು! ಒಂದೊಂದು ಹಸುವೂ ಸಹಸ್ರಧಾರೆ ಕೊಡುವಂಥದ್ದಾಗಿತ್ತು. ಒಂದು ಧಾರೆಯಲ್ಲಿ ಒಂದು ತೊಲಕ್ಕಿಂತ ಹೆಚ್ಚಾಗಿಯೇ ಹಾಲು ಇದ್ದಿರಬಹುದು. ಒಂದು ಸಾವಿರ ಧಾರೆಗಳೆಂದರೆ ಒಂದು ಸಾವಿರ ತೊಲಗಳಿಗಿಂತ ಹೆಚ್ಚು. ಅಂದರೆ ೨೫-೩೦ ಸೇರು ಹಾಲು ಕೊಡುವ ಹಸುಗಳು ವೇದಕಾಲದಲ್ಲಿ ಈ ದೇಶದಲ್ಲಿದ್ದವು. ಏಕೆಂದರೆ ಆಗ ಬಹಳ ಕಾಡು ಇತ್ತು. ಬಹಳಷ್ಟು ಹುಲ್ಲು ತಿನ್ನುತ್ತಿದ್ದಿರಬಹುದು.

ಪೂಯಂ ಗೋವೋ ಮೇದಯಥಾ ಕೃಶಂಚಿತ್ ಅಶ್ರೀರಂ ಚಿತ್ ಕೃಣುಥಾ ಸುಪ್ರತೀಕಮ್– ಹೇ, ಗೋವುಗಳೇ! ಕೃಷವಾದ ಶರೀರವನ್ನು ನೀವು ಮೇಧಯುಕ್ತವನ್ನಾಗಿ

ಮಾಡುತ್ತೀರಿ. ಮೇಧ = ಫ್ಯಾಟ್ ಅಂದರೆ ಪುರಪುಷ್ಯ. ಯಾವ ಶರೀರ ಅ–ಶ್ರೀರವಿದೆಯೋ, ಗೋ ಅದನ್ನು ಶ್ರೀರ ಮಾಡುತ್ತದೆ. ಶ್ರೀರವೆಂದರೆ ಶೋಭಿಸುವಿಕೆ, ಸುಂದರತೆ.

ವೇದದಲ್ಲಿ ಗೋವಿಗೆ 'ಅಧನ್ಯಾ' ಎಂಬ ಹೆಸರಿದೆ. ಅಧನ್ಯಾ ಎಂದರೆ ಅ–ಹನನೀಯ. ಅದನ್ನು ಕೊಲ್ಲಕೂಡದು. ಇಷ್ಟೇ ಅಲ್ಲ, ಹೊಡೆಯುವುದಕ್ಕೂ ಅದು ಯೋಗ್ಯವಲ್ಲ. ಹಸುಗಳು ಅಧನ್ಯಾ ಇವೆ. ಒಂದು ಕಡೆಗೆ ಹೇಳಲಾಗಿದೆ – **ಸುಪ್ರಪಾಣಂ ಭವತು ಅಧನ್ಯಾಭಃ** ಈ ಅಧನ್ಯಾ ಪ್ರಾಣಿಗಳಿಗೆ ಕುಡಿಯಲು ನಿರ್ಮಲವಾದ ನೀರಿನ ಯೋಜನೆ ಇರಲಿ – ಸುಪ್ರಪಾಣಂ.

ವೇದದಲ್ಲಿ ಗೋವುಗಳಿಗಿಂತ ಹೆಚ್ಚಾಗಿ ಇನ್ನು ಬೇರೆ ಯಾವುದೇ ವಸ್ತುವಿನ ಸ್ತುತಿ ಬಂದಿಲ್ಲ. ಅದನ್ನು ಪರಮಾತ್ಮನ ಮೂರ್ತಿ ಎಂದು ಹೇಳಲಾಗಿದೆ. ಎಲ್ಲಾ ದೇವತೆಗಳು ಗೋವಿನಲ್ಲಿ ಒಟ್ಟಿಗೆ ಸೇರಿದ್ದಾರೆ. ಆದ್ದರಿಂದ ಅದು ಮಾತೆ. ಗೋವಿಗೆ ಧೇನು, ಗೌ, ಗೌತಮ ಇತ್ಯಾದಿ ಶಬ್ದಗಳಿವೆ. ಗೌ ಎಂಬುದು ಅನೇಕ ಪವಿತ್ರ ಅರ್ಥವಾಚಕ ಶಬ್ದವಾಗಿದೆ. ಧ್ಯಾನ ಮತ್ತು ಅಧ್ಯಯನಕ್ಕಾಗಿ ಅನೇಕ ಉತ್ತಮ ಸ್ಥಾನಗಳನ್ನು ಹೇಳಲಾಗಿದೆ – ಉದಾಹರಣೆಗೆ ಎತ್ತರವಾದ ಬೆಟ್ಟದ ಮೇಲೆ ಯಾವುದಾದರೊಂದು ಶಾಂತವಾದ ಸ್ಥಾನ, ರಮಣೀಯವಾದ ನದಿಯ ದಂಡೆ ಇತ್ಯಾದಿ. ಆದರೆ ಇವೆರಡಕ್ಕೂ ಸಮಾನವಾದ ಸ್ಥಾನ ಗೋವಿನ ಕತ್ತು ಎಂದು ಹೇಳಲಾಗಿದೆ. ಆದ್ದರಿಂದ ಅದನ್ನು ಅಸ್ವಚ್ಛವಾಗಿ ಇಡುವಂತಿಲ್ಲ. ಸ್ವಚ್ಛವಾಗಿಡಬೇಕು. ಅದರಲ್ಲಿ ಒಂದಲ್ಲಾ ಒಂದು ಚಮತ್ಕಾರಕ ಗುಣ ಇದೆ. ಆದ್ದರಿಂದಲೇ ಋಷಿಗಳ ಮನಸ್ಸು ಇವುಗಳನ್ನು ನದಿಯ ರಮ್ಯ ತಟಕ್ಕೆ ಸಮಾನವೆಂದು ತಿಳಿದಿರಬಹುದಲ್ಲವೆ? ಅಂದರೆ ಗೋಸೇವೆ ಮತ್ತು ಆರೈಕೆ ಕೂಡ ಆ ಕಾಲದಲ್ಲಿ ವಿಶೇಷವಾಗಿ ಆಗುತ್ತಿರಬಹುದು.

ಪ್ರಾಚೀನಕಾಲದಲ್ಲಿ ಜನರು ಮಾಂಸಾಹಾರ ಮಾಡುತ್ತಿದ್ದರು. ಪಶುಹತ್ಯೆ ಮಾಡಿ ನಾವು ಜೀವಿಸುವುದು ಮಾನವತೆಗೆ ಶೋಭಿಸುವಂತಹ ಮಾತಲ್ಲವೆಂದು ಋಷಿಗಳಿಗೆ ಅನಿಸಿತು. ಆದ್ದರಿಂದ ಮಾಂಸಾಹಾರದಿಂದ ಬಿಡುಗಡೆ ಹೊಂದುವ ಬಗೆಯನ್ನು ಹುಡುಕಲಾರಂಭಿಸಿದರು. ಆಗ ವ್ಯವಸಾಯದ ಶೋಧನೆಯಾಯಿತು. ವ್ಯವಸಾಯದಿಂದ ಕಾಳುಗಳನ್ನು ಬೆಳೆದು ಉಪಯೋಗಿಸಿದಲ್ಲಿ ಮಾಂಸಾಹಾರವನ್ನು ಕಡಿಮೆ ಮಾಡಬಹುದೆಂದು ತೋರಿತು. ಅಂದಿನಿಂದ ಈ ಕ್ಷೇತ್ರದಲ್ಲಿ ಅಹಿಂಸೆಯ ಪ್ರಕ್ರಿಯೆ ಆರಂಭವಾಯಿತು. ಜೊತೆಯಲ್ಲಿ ಹಸುವಿನ ಹಾಲಿನ ಉಪಯೋಗವೂ ಹೊಳೆಯಿತು. ಇದರಿಂದ ಮಾಂಸಾಹಾರದಿಂದ ಮುಕ್ತಗೊಳ್ಳುವ ಯುಕ್ತಿಯೂ ಸಿದ್ಧಿಸಿತು.

ಗೋಭಿಷ್ಟರೇ ಮಾಡುತಿಂ ದುರೇವಾಂ
ಯವೇನ ಕ್ಷುಧಂ ಪುರೂಹೂತ ವಿಶ್ವಂ

ಮನುಷ್ಯನ ಕೂಗನ್ನುಕೇಳುವ ಹೇ ಭಗವಂತ! ದುರ್ಮಾಗದತ್ತ ಕರೆದೊಯ್ಯುವ ಅಬುದ್ಧಿಯನ್ನು ಹಸುಗಳ ನೆರವಿನಿಂದ ಮತ್ತು ಎಲ್ಲರನ್ನೂ ಹಿಡಿಯುವ ಹಸಿವನ್ನು ಅನ್ನದ ಬಲದಿಂದ ನಾವು ಈಜುವಂತೆ ಮಾಡು.

ಜಗತ್ತಿನ ಹಸಿವೆಯನ್ನೇನೋ ನಾವು ಕಾಳಿನ ಆಧಾರದಿಂದ ಈಡೇರಿಸಿಕೊಳ್ಳಬಲ್ಲೆವು. ಆದರೆ **ದುರೇವಾ ಅಮತಿಂ** ಅಂದರೆ ದುರ್ಮಾರ್ಗಕ್ಕೆ ಒಯ್ಯುವ ಅಂದರೆ ಅಬುದ್ಧಿಯತ್ತ ಒಯ್ಯುವ ಮಾಂಸಾಹಾರದ ಕಡೆಗೆ ಪ್ರವೃತ್ತರನ್ನಾಗಿ ಮಾಡುವ ಅಬುದ್ಧಿಯನ್ನು ನಾವು ಹಸುವಿನ ಹಾಲಿನ ಮೂಲಕವೇ ದೂರಮಾಡಬಲ್ಲೆವು.

ಹಸುವಿನ ಮಹಿಮೆಯನ್ನು ಹಾಡುತ್ತ ವೇದ ಹೇಳುತ್ತದೆ, **ಗಾವ ಇವ ಗ್ರಾಮಂ ಯೂಯುಧಿರಿವ ಅಶ್ವವಾನ್** ಯಾವ ರೀತಿ ಯೋಧನು ಕುದುರೆಯ ಅಕ್ಕಪಕ್ಕನಿರುತ್ತಾನೋ, ಅದೇ ಪ್ರಕಾರ ಗೋವುಗಳ ನಾಲ್ಕೂ ದಿಕ್ಕಿನಲ್ಲಿ ಗ್ರಾಮ ನೆಲಸುತ್ತದೆ. ಹಸುವಿನ ಆಧಾರದ ಮೇಲೆಯೇ ರೈತನ ಜೀವನ ನಡೆಯುತ್ತದೆ. ಹಸುವಿನ ಹಾಲನ್ನು ಕರೆಯುವ ಕೆಲಸ ರೈತನ ಮಗಳ ಜವಾಬ್ದಾರಿಯಾಗಿತ್ತು. ಅವಳು ಹಾಲು ಕರೆಯುವವಳಾಗಿದ್ದರಿಂದ ಅವಳನ್ನು ಹಾಲು ಕೊಡುವವಳೆಂದು ಕರೆಯುತ್ತಿದ್ದರು.

ಹಸುವಿಗೆ "ಗೋ" ಎಂಬ ಶಬ್ದವಿದೆ. ಅದರ ಮೇಲಿಂದಲೇ ಇಂಗ್ಲೀಷಿನಲ್ಲಿ 'ಗ್ಯ' ಎಂದೆನ್ನುತ್ತಾರೆ. ಅಲ್ಲಿಯ ಜನರು ಹಸುವಿನ ಸೇವೆ ಮಾಡುತ್ತಾರೆ. ಹಸು ನಮ್ಮ ತಾಯಿಯೆಂಬುದನ್ನು ಅವರು ಕೂಡ ತಿಳಿಯುತ್ತಾರೆ. ಇತ್ತ ಇಂಗ್ಲೆಂಡಿನಿಂದ ಹಿಡಿದು ಅತ್ತ ಜಾಪಾನ್‌ವರೆಗೆ ಗೋ ಸೇವೆಯ ಮಾತು ಮುಟ್ಟಿದೆ.

(ಮುಂದುವರಿಯುವುದು...)

* * *

ಸನ್ಮಾನ್ಯರಿಂದ...

ಜನಪದ ವಿಚಾರ ಪತ್ರಿಕೆಯಲ್ಲಿ ಬರುತ್ತಿರುವ ವಿಚಾರಗಳು ಚಿಂತನೀಯವಾಗಿವೆ. ಯುವಕರಿಗೆ ಮಾರ್ಗದರ್ಶಕವೂ ಹೌದು. ಅದಕ್ಕಾಗಿ ಕೃತಜ್ಞತೆಗಳು.

- ಜಿ.ವಿ.ವಿ. ಶಾಸ್ತ್ರಿ, ತುಮಕೂರು

ಜನಪದ ವಿಚಾರ ಪತ್ರಿಕೆಯಲ್ಲಿ ಬರುತ್ತಿರುವ ವಿಚಾರಗಳು ಎಂದಿನಂತೆ ವಿಚಾರ ಪೂರಿತವಾಗಿವೆ. ಅಭಿವೃದ್ಧಿ ಕುರಿತ ನಿಮ್ಮ ಲೇಖನ ಚೆನ್ನಾಗಿದೆ. ಒಂದೆಡೆ 'ಸಾಕ್ರೆಟಿಸ್-ಪ್ಲೇಟೋ' ಅವರು ಚೀನಾದೇಶದ ಚಿಂತಕರು ಎಂಬುದಾಗಿ ಇದೆ. 'ಕೈತಪ್ಪು ಅಲ್ಲವೆ' ಈ ಇಬ್ಬರೂ ಗ್ರೀಸ್ ದೇಶದವರು. ಚೀನಾದ ಚಿಂತಕರು 'ಕನ್‌ಫ್ಯೂಷಿಯಸ್-ಲಾವೋತ್ಸೆ' ನಿಮ್ಮ ಗಮನಕ್ಕೆ ತಂದಿದ್ದೇನೆ.

- ನೀಲತ್ತಹಳ್ಳಿ ಕಸ್ತೂರಿ, ಬೆಂಗಳೂರು

* * *

ಜನಪದ ಧ್ವನಿ

ಪರದೇಶದ ಒಬ್ಬ ಸಾಮಾನ್ಯ ಮಾನವನಿಗೂ ನಮ್ಮ ದೇಶದ ಒಬ್ಬ ವ್ಯಕ್ತಿಗೂ ಇರುವ ವ್ಯತ್ಯಾಸಗಳಲ್ಲಿ ಎದ್ದು ಕಾಣುವುದು ಅವನವನ ದೇಶ ಋಣಕ್ಕೆ ಸಂಬಂಧಿಸಿದುದು. ಪರದೇಶದವನು ತನ್ನ ದೇಶದಿಂದ ತಾನು ಅಧಿಕ ಲಾಭ ಪಡೆದಿರುವೆ, ಇನ್ನೂ ಪಡೆಯುತ್ತೇನೆ, ಎಂದು ಧನ್ಯತಾಭಾವದಿಂದ ಒಪ್ಪಿ ಅದಕ್ಕೆ ಪ್ರತಿಫಲವಾಗಿ ತನ್ನಿಂದಲೂ ದೇಶಕ್ಕೆ ಸಲ್ಲಬೇಕಾದ ಸೇವೆಗಳು ಇವೆ ಎಂಬ ಜ್ಞಾಪಕದಲ್ಲಿ ಸದಾ ಇರುತ್ತಾನೆ. ದೇಶಕ್ಕಾಗಿ ತನ್ನ ಸೇವೆಯನ್ನು ಕೆಲವು ಗಂಟೆಗಳಾದರೂ ಮೀಸಲಿಡುತ್ತಾನೆ. ಅದೇ ನಮ್ಮ ದೇಶದವನಿಗೆ ದೇಶ ಸೇವೆ ಎಂದರೇನೆಂಬ ಜ್ಞಾನ ಕೂಡ ಇರುವುದಿಲ್ಲ. ದೇಶದಿಂದ ಏನೇನು ಸೇವೆ ಪಡೆದುಕೊಳ್ಳಲು, ಲಾಭ ಹೊಂದಲು ಸಾಧ್ಯವೊ ಅಷ್ಟನ್ನೂ ಪಡೆದಿರುತ್ತಾನೆ. ತನ್ನಿಂದ ಆದಷ್ಟು ಈ ದೇಶಕ್ಕೆ ಸೇವೆ ಸಲ್ಲಿಸಬೇಕೆಂಬ ಪರಿಜ್ಞಾನ ಕೂಡ ಇಲ್ಲದೆ ಪರದೇಶಕ್ಕೆ ಪಲಾಯನ ಕೈಗೊಳ್ಳುತ್ತಾನೆ. ಅಲ್ಲೇ ನೆಲೆನಿಂತು ಬಿಡುತ್ತಾನೆ. ಇಲ್ಲವೇ ತಾನಾಯಿತು ತನ್ನ ಮನೆ ಆಯಿತು. ಮನೆಗೆ ಏನೇನು ಬೇಕೋ ಅಷ್ಟು ಸೌಕರ್ಯ ಪಡೆದು ಇನ್ನೂ ಹೆಚ್ಚಿನ ಸೌಲಭ್ಯಕ್ಕೆ ಕಾಯುತ್ತ, ತನ್ನ ಹೆಂಡತಿ ಮಕ್ಕಳಿಗೆ ಎಷ್ಟು ಆಸ್ತಿ ಮಾಡಬೇಕು ಎಂಬುದರತ್ತಲೇ ಗಮನವೀಯುತ್ತಾನೆ. ಮನೆಯೊಳಗೆ ತನ್ನ ಕುಟುಂಬ ಸೌಖ್ಯವಾಗಿರಬೇಕು ಎಂಬುದಷ್ಟೇ ಅವನ ಯೋಚನೆ.

ನಾವೀಗ ವಿದೇಶೀ ಸಂಸ್ಕೃತಿಯತ್ತ ಮಾರು ಹೋಗಿದ್ದೇವೆ. ವಿದೇಶಿ ಸಂಸ್ಕೃತಿಯಲ್ಲಿ ಎಲ್ಲವೂ ಕೆಟ್ಟದಲ್ಲ. ನಮ್ಮದರಲ್ಲೂ ಕೆಟ್ಟದಿದೆ. ಯಾವುದು ಒಳ್ಳೆಯದೋ ಅದನ್ನು ಮಾತ್ರ ತೆಗೆದುಕೊಳ್ಳಬೇಕು. ಅಲ್ಲಿ ಜನರು ೨೪ ಗಂಟೆ ಕೆಲಸ ಮಾಡಲು ತಯಾರಿರುತ್ತಾರೆ. ಅಂಥ ಸಾಮರ್ಥ್ಯವನ್ನು ನಾವೂ ಅಳವಡಿಸಿಕೊಳ್ಳೋಣ. ಈಗ ನಾವೇನು ಮಾಡಿದ್ದೇವೆ? ಅಲ್ಲಿಯ ಭೋಗಪ್ರಧಾನ ದೃಷ್ಟಿಯನ್ನು ಮಾತ್ರ ಅನುಸರಿಸುತ್ತಿರುವುದು ದುರಂತ.

ನಮ್ಮ ಭಾವನ ಮಗಳು ಅಮೇರಿಕಾದಲ್ಲಿ ಹುಟ್ಟಿ ಬೆಳೆದವಳು. ಅವಳಿಲ್ಲಿಗೆ ರಜದಲ್ಲಿ ಬಂದಾಗ ಒಮ್ಮೆ ಅವಳಜ್ಜ ಏನೋ ಮಾತಿಗೆ ಅಮೇರಿಕವನ್ನು ಟೀಕಿಸುತ್ತಿದ್ದರು. ಸ್ವಲ್ಪಹೊತ್ತು ಅದನ್ನು ಆಲಿಸಿದ್ದ ಏಳು ವರ್ಷದ ಹುಡುಗಿ, "ಅಜ್ಜ, ನಿಲ್ಲು, ನೀನು ಅಮೇರಿಕವನ್ನು ಬೈಯಬೇಡ. ಅದರ ಅಧ್ಯಕ್ಷರನ್ನು ಎಷ್ಟು ಬೇಕಾದರೂ ಬೈ. ದೇಶ ಏನು ಮಾಡಿದೆ?" ಎಂದು ಉದ್ವೇಗದಿಂದ ಕೇಳಿದಳು. ಆ ಪುಟ್ಟ ಹುಡುಗಿಯಲ್ಲಿ ಅಡಕವಾಗಿರುವ ದೇಶಪ್ರೇಮ ನಮ್ಮ ಯುವಜನತೆಯಲ್ಲಿದೆಯೇ ಎಂದು ನಾವು ಪ್ರತಿಯೊಬ್ಬರೂ ಪ್ರಶ್ನಿಸಿಕೊಳ್ಳಬೇಕಾಗಿದೆ. ಚಿಂತನೆಮಾಡಿಕೊಳ್ಳಬೇಕಾಗಿದೆ.

⊙ *ರುಕ್ಮಿಣಿಮಾಲಾ, ಮೈಸೂರು*

ಗ್ರಾಮೀಣ ಕ್ರಾಂತಿಯ ಹರಿಕಾರ ಮುಹಮ್ಮದ್ ಯುನಸ್‌ರವರ ವಿಚಾರಗಳು

(2006ನೇ ಇಸವಿಯಲ್ಲಿ ಡಾ.ಮುಹಮ್ಮದ್ ಯುನಸ್ ನೊಬೆಲ್ ಪ್ರಶಸ್ತಿ ಸ್ವೀಕೃತಿ ಸಮಾರಂಭದಲ್ಲಿ ಮಾಡಿದ ಭಾಷಣದ ಪೂರ್ಣಪಾಠ. ಅವರ ಈ ಭಾಷಣದಲ್ಲಿ ಮಹಾತ್ಮಾ ಗಾಂಧೀಯವರ ಅನೇಕ ವಿಚಾರಗಳು ಹೊಸ ಭಾಷೆಯಲ್ಲಿ, ಹೊಸ ಸನ್ನಿವೇಶದಲ್ಲಿ ಪ್ರಕಟಗೊಂಡಿವೆ.)

ನಾರ್ವೆ ದೇಶದ ನೊಬೆಲ್ ಕಮಿಟಿಯ ಗೌರವಾನ್ವಿತ ಸದಸ್ಯರೇ, ಮಹನೀಯರೇ, ಮಹಿಳೆಯರೇ,

ಗ್ರಾಮೀಣ ಬ್ಯಾಂಕ್ ಮತ್ತು ನಾನು ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಯನ್ನು ಸ್ವೀಕರಿಸುವುದರ ಮೂಲಕ ಬಹುವಾಗಿ ಸನ್ಮಾನಿತರಾಗಿದ್ದೇವೆ. ಈ ಪ್ರಶಸ್ತಿಯಿಂದ ನಾವು ರೋಮಾಂಚಿತಗೊಂಡಿದ್ದೇವೆ, ಆನಂದಭರಿತರಾಗಿದ್ದೇವೆ. ಈ ನೊಬೆಲ್ ಶಾಂತಿ ಪುರಸ್ಕಾರದ ಘೋಷಣೆಯಾದಂದಿನಿಂದ ಪ್ರಪಂಚದ ಎಲ್ಲಡೆಯಿಂದ ಸಂಖ್ಯೆಗೆ ಎಟುಕದಷ್ಟು ಸಂದೇಶಗಳು ಬಂದಿವೆ. ಆದರೆ ಇವುಗಳಲ್ಲೆಲ್ಲ ನನ್ನ ಹೃದಯವನ್ನು ಸ್ಪರ್ಶಿಸುವ ಸಂದೇಶಗಳು ಬಾಂಗ್ಲಾದೇಶದ ದೂರದೂರದ ಹಳ್ಳಿಗಳಿಂದ ಗ್ರಾಮೀಣ ಬ್ಯಾಂಕಿನಿಂದ ಸಾಲ ಪಡೆದವರಿಂದ ಬರುವ ಸಂದೇಶಗಳಾಗಿವೆ. ಈ ಪ್ರಶಸ್ತಿ ಸಂದಿರುವುದಕ್ಕೆ ತಾವು ಪಡುತ್ತಿರುವ ಹೆಮ್ಮೆಯನ್ನು ಅವರು ಸೂಚಿಸಬಯಸಿದ್ದಾರೆ. ಗ್ರಾಮೀಣ ಬ್ಯಾಂಕಿನ ಸಾಲ ಪಡೆದ ಏಳು ದಶಲಕ್ಷ ಸಾಲಗಾರರ ಹಾಗೂ ಆ ಬ್ಯಾಂಕಿನ ಮಾಲೀಕರೂ ಆದ ಅವರ ಪರವಾಗಿ ಒಂಭತ್ತು ಜನ ಪ್ರತಿನಿಧಿಗಳು ಓಸ್ಲೋದವರೆಗೆ ನನ್ನೊಂದಿಗೆ ಬಂದು ಈ ಪ್ರಶಸ್ತಿಯನ್ನು ಸ್ವೀಕರಿಸಿಸುತ್ತಿದ್ದಾರೆ. ಈ ವರ್ಷದ ನೊಬೆಲ್ ಶಾಂತಿ ಪ್ರಶಸ್ತಿಗಾಗಿ ಗ್ರಾಮೀಣ ಬ್ಯಾಂಕನ್ನು ಆಯ್ಕೆ ಮಾಡಿದ್ದಕ್ಕಾಗಿ ನಾನು ಅವರ ಪರವಾಗಿ ನೊಬೆಲ್ ಕಮಿಟಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಅವರ ಸಂಸ್ಥೆಗೆ ಜಗತ್ತಿನ ಅತ್ಯಂತ ಶ್ರೇಷ್ಠ ಪ್ರಶಸ್ತಿಯನ್ನು ಕೊಟ್ಟಿರುವುದರಿಂದ ನೀವು ಅವರಿಗೆ ಅದ್ವಿತೀಯವಾದ ಗೌರವವನ್ನು ಸಲ್ಲಿಸಿದ್ದೀರಿ. ನಿಮ್ಮ ಪ್ರಶಸ್ತಿಗಾಗಿ ವಂದನೆಗಳು. ಬಾಂಗ್ಲಾದೇಶದ ಒಂಭತ್ತು ಅಭಿಮಾನಿ ಮಹಿಳೆಯರು ನೊಬೆಲ್ ಪ್ರಶಸ್ತಿ ಪಡೆದು ನೊಬೆಲ್ ಶಾಂತಿ ಪುರಸ್ಕಾರಕ್ಕೆ ಹೊಸ ಅರ್ಥ ತಂದು ಕೊಟ್ಟಿದ್ದಾರೆ.

ಗ್ರಾಮೀಣ ಬ್ಯಾಂಕಿನ ಎಲ್ಲ ಸಾಲಗಾರರು ಇಂದಿನ ದಿನವನ್ನು ತಮ್ಮ ಜೀವನದ ಬಹುದೊಡ್ಡ ದಿನವೆಂದು ಆಚರಿಸುತ್ತಿದ್ದಾರೆ. ಇಡೀ ಬಾಂಗ್ಲಾ ದೇಶದಲ್ಲಿ ತಮ್ಮ ತಮ್ಮ ಹಳ್ಳಿಗಳಲ್ಲಿ ಹತ್ತಿರದ ದೂರದರ್ಶನ ಪೆಟ್ಟಿಗೆಯ ಸುತ್ತ ಹಳ್ಳಿಗರು ಕುಳಿತು ಈ ಸಮಾರಂಭದ ಕಾರ್ಯಕ್ರಮವನ್ನು ವೀಕ್ಷಿಸುತ್ತಿದ್ದಾರೆ.

ಈ ವರ್ಷದ ಪ್ರಶಸ್ತಿಯು ತಮ್ಮ ದೈನಂದಿನ ಜೀವನ ನಿರ್ವಹಣೆಗಾಗಿ ಮತ್ತು ಮಕ್ಕಳ ಉತ್ತಮ ಜೀವನದ ಆಸೆಯನ್ನು ಹೊತ್ತು ದಿನವೂ ಜಗತ್ತಿನಾದ್ಯಂತ ಲಕ್ಷಾವಧಿ

ಮಹಿಳೆಯರಿಗೆ ಪರಮೋಚ್ಚ ಗೌರವವನ್ನೂ, ಘನತೆಯನ್ನೂ ತಂದುಕೊಟ್ಟಿದೆ.

ಮಹಿಳೆಯರೇ ಮತ್ತು ಮಹನೀಯರೇ,

ಈ ಪ್ರಶಸ್ತಿಯನ್ನು ಕೊಟ್ಟು ನಾರ್ವೆ ನೊಬೆಲ್ ಸಮಿತಿ ಬಡತನದೊಂದಿಗೆ ಶಾಂತಿ ಬಿಡಿಸಲಾರದ ರೀತಿಯಲ್ಲಿ ತಳಕು ಹಾಕಿಕೊಂಡಿದೆ ಎಂಬ ಸಲಹೆಗೆ ಮಹತಿಯುಕ್ತ ಬೆಂಬಲ ಕೊಟ್ಟಿದೆ. ಬಡತನ ಶಾಂತಿಗೆ ಆಪತ್ಕಾರಿಯಾಗಿದೆ. ಜಗತ್ತಿನ ಆದಾಯ ಹಂಚಿಕೆ ವಿಷಯ ಮನೋಜ್ಞವಾಗಿ ಚಿತ್ರಿತವಾಗಿದೆ. ಜಗತ್ತಿನ ಶೇಕಡಾ ೯೪ರಷ್ಟು ಆದಾಯ ಜಗತ್ತಿನ ಜನಸಂಖ್ಯೆಯ ಶೇಕಡಾ ೪೦ರಷ್ಟು ಜನಕ್ಕೆ ಹೋಗುತ್ತದೆ. ಇನನು ಶೇಕಡಾ ೬೦ರಷ್ಟು ಜನರು ಜಗತ್ತಿನ ಆದಾಯದ ಶೇಕಡಾ ೬ರಷ್ಟರ ಮೇಲೆ ಜೀವಿಸುತ್ತಿದ್ದಾರೆ. ಜಗತ್ತಿನ ಅರ್ಧ ಜನಸಂಖ್ಯೆಯ ಜನರು ದಿನವೊಂದಕ್ಕೆ ಎರಡು ಡಾಲರ್ ಹಣದ ಮೇಲೆ ಜೀವಿಸಿದರೆ, ಒಂದು ಬಿಲಿಯನ್ ಜನರು ಒಂದು ಡಾಲರಿಗೂ ಕಡಿಮೆ ಹಣದಲ್ಲಿ ಜೀವನ ನಡೆಸುತ್ತಾರೆ. ಇದು ಶಾಂತಿಯ ಸೂತ್ರವಲ್ಲ.

ಹೊಸ ಸಹಸ್ರಮಾನವು ಜಾಗತಿಕ ಮಟ್ಟದ ಬೃಹತ್ ಕನಸಿನೊಂದಿಗೆ ಪ್ರಾರಂಭವಾಯಿತು. ೨೦೦೦ನೇ ಇಸ್ವಿಯಲ್ಲಿ ಜಗತ್ತಿನ ನಾಯಕರು ವಿಶ್ವ ಸಂಸ್ಥೆಯಲ್ಲಿ ಒಗ್ಗೂಡಿದರು; ೨೦೧೧ರ ವೇಳೆಗೆ ಬಡತನವನ್ನು ಅರ್ಧ ಮಟ್ಟಕ್ಕೆ ಇಳಿಸಬೇಕೆಂಬ ಐತಿಹಾಸಿಕ ಗುರಿಯನ್ನು ಅಂಗೀಕರಿಸಿದರು. ಮಾನವಕುಲದ ಇತಿಹಾಸದಲ್ಲಿ ಈ ಮೊದಲು ಎಂದೂ ಇಡೀ ಜಗತ್ತು ಏಕ ಕಂಠದಿಂದ ಸಮಯದ ನಿರ್ಬಂಧದೊಂದಿಗೆ ಮತ್ತು ನಿರ್ದಿಷ್ಟ ಪ್ರಮಾಣದ ದಿಟ್ಟ ಗುರಿಯನ್ನು ಎಂದೂ ಅಂಗೀಕರಿಸಿರಲಿಲ್ಲ. ಅಷ್ಟು ಹೊತ್ತಿಗೆ ಸೆಪ್ಟಂಬರ್ ೧೧ ಮತ್ತು ಇರಾಕ್ ಯುದ್ಧ ಬಂತು. ಆ ಕನಸನ್ನು ನನಸನ್ನಾಗಿ ಮಾಡಬೇಕಿದ್ದ ಜಗತ್ತಿನ ಆಯ ಒಮ್ಮೆಲೆ ತಪ್ಪಿತು. ಜಗತ್ತಿನ ನಾಯಕರ ಗಮನ ಬಡತನ ವಿರುದ್ಧ ಯುದ್ಧದ ಬದಲಾಗಿ ಭಯೋತ್ಪಾದನೆ ವಿರುದ್ಧ ಯುದ್ಧದತ್ತ ಹರಿಯಿತು. ಇದುವರೆಗೆ ಅಮೇರಿಕಾ ದೇಶವೊಂದೇ ಇರಾಕ್ ಯುದ್ಧಕ್ಕಾಗಿ ೫೩೦ ಬಿಲಿಯನ್ ಡಾಲರಿಗಿಂತ ಹೆಚ್ಚು ಖರ್ಚುಮಾಡಿದೆ. ಸೇನಾಕ್ರಮದಿಂದ ಭಯೋತ್ಪಾದನೆಯನ್ನು ಸೋಲಿಸಬಹುದೆಂದು ನಾನು ನಂಬುವುದಿಲ್ಲ. ಭಯೋತ್ಪಾದಕತೆಯನ್ನು ಕಟು ಭಾಷೆಯಲ್ಲಿ ಖಂಡಿಸಬೇಕು. ನಾವೆಲ್ಲರೂ ಅಚಲರಾಗಿ ಅದರ ವಿರುದ್ಧ ನಿಲ್ಲಬೇಕಲ್ಲದೆ ಅದು ಇಲ್ಲದಂತೆ ಮಾಡಲು ಎಲ್ಲ ಉಪಾಯಗಳನ್ನು ಮಾಡಬೇಕು. ಭಯೋತ್ಪಾದನೆ ಮುಂದೆಂದಿಗೂ ಇಲ್ಲದಂತೆ ಮಾಡಲು ನಾವು ಅದರ ಮೂಲ ಕಾರಣಗಳನ್ನು ಎದುರಿಸಬೇಕು. ಬಡವರ ಬದುಕನ್ನು ಹಸನಾಗಿಸುವುದಕ್ಕೆ ನಮ್ಮ ಸಂಪನ್ಮೂಲಗಳನ್ನು ತೊಡಗಿಸಬೇಕೇ ಹೊರತು ಬಂದೂಕಗಳ ಉಪಯೋಗಕ್ಕಾಗಿ ಅಲ್ಲ ಎಂಬುದು ನನ್ನ ನಂಬಿಕೆ. ಬಡತನವೆಂದರೆ ಮಾನವ ಹಕ್ಕುಗಳ ನಿರಾಕರಣೆ. ಶಾಂತಿಯನ್ನು ಮಾನವೀಯ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕು – ವಿಶಾಲವಾದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಅರ್ಥದ ಹಿನ್ನೆಲೆಯಲ್ಲಿ ಅರ್ಥೈಸಬೇಕು. ನ್ಯಾಯವಲ್ಲದ ಆರ್ಥಿಕ, ಸಾಮಾಜಿಕ ವ್ಯವಸ್ಥೆ, ಪ್ರಜಾತಂತ್ರವಿಲ್ಲದಿರುವಿಕೆ, ಪರಿಸರದ ಅವನತಿ ಮತ್ತು ಮಾನವ ಹಕ್ಕುಗಳಿಲ್ಲದಿರುವಿಕೆ ಶಾಂತಿಗೆ ಆಪತ್ತನ್ನು ತಂದಿವೆ. ಮಾನವ ಹಕ್ಕುಗಳಿಲ್ಲದಿರುವಿಕೆಯೆ ಬಡತನ. ತೀವ್ರತಮ ಬಡತನದಿಂದ ಉಂಟಾದ ಹತಾಶ ಮನೋಭಾವನೆ, ವೈರತ್ವ

ಮತ್ತು ಕೋಪ ಯಾವುದೇ ಸಮಾಜದಲ್ಲಿ ಶಾಂತಿಯನ್ನು ಉಳಿಸಲಾರವು. ಅಚಲವಾದ ಶಾಂತಿ ಸ್ಥಾಪನೆಗಾಗಿ ನಾವು ಜನರಿಗೆ ಗೌರವಯುತ ಜೀವನ ನಡೆಸಲು ಅಗತ್ಯವಾದ ಅವಕಾಶಗಳನ್ನು ಒದಗಿಸಬೇಕು. ಕಳೆದ ಮೂವತ್ತೈದು ವರ್ಷಗಳಿಂದ ಯಾವ ಕೆಲಸಕ್ಕೆ ನಮ್ಮನ್ನು ತೊಡಗಿಸಿಕೊಂಡಿದ್ದೇವೆಯೋ ಆ ಕೆಲಸದ ಕೇಂದ್ರ ವಿಷಯ ಬಹುಸಂಖ್ಯಾತರಾದ ಬಡವರಿಗೆ ಅವಕಾಶಗಳನ್ನು ಕಲ್ಪಿಸಿಕೊಡುವುದೇ ಆಗಿದೆ.

ಗ್ರಾಮೀಣ ಬ್ಯಾಂಕ್

ಬಡತನ ಸಂಬಂಧದ ವಿಷಯದಲ್ಲಿ ನಾನು ತೊಡಗಿಸಿಕೊಂಡದ್ದು ಓರ್ವ ನೀತಿ ನಿರೂಪಕನೆಂದಾಗಲೀ, ಸಂಶೋಧಕನೆಂದಾಗಲೀ ಅಲ್ಲ. ತೊಡಗಿಸಿಕೊಂಡದಕ್ಕೆ ಕಾರಣ ಬಡತನ ನನ್ನ ಸುತ್ತಲೂ ಇತ್ತು. ನಾನು ಅದರಿಂದ ದೂರ ಹೋಗಲು ಸಾಧ್ಯವಿರಲಿಲ್ಲ. ೧೯೭೪ರಲ್ಲಿ ಬಾಂಗ್ಲಾದೇಶದಲ್ಲಿ ಬಿದ್ದಿದ್ದ ಭೀಕರ ಬರಗಾಲದ ಹಿನ್ನೆಲೆಯಿಟ್ಟುಕೊಂಡು ವಿಶ್ವವಿದ್ಯಾನಿಲಯದ ತರಗತಿಯಲ್ಲಿ ಅರ್ಥಶಾಸ್ತ್ರದ ಉನ್ನತ ಮಟ್ಟದ ಪ್ರಮೇಯಗಳನ್ನು ಕಲಿಸುವುದು ನನಗೆ ಕಷ್ಟವೆಂದೆನಿಸಿತು. ಕಿತ್ತುತಿನ್ನುವ ಹಸಿವು ಮತ್ತು ಬಡತನದ ಎದುರಿನಲ್ಲಿ ಆ ಪ್ರಮೇಯಗಳ ಪೊಳ್ಳುತನ ಒಮ್ಮೆಲೆ ಅನುಭವವಾಗತೊಡಗಿತು. ನನ್ನ ಸುತ್ತಲಿನ ಜನರಿಗೆ ನೆರವಾಗಲು ಏನನ್ನಾದರೂ ಮಾಡಬೇಕು, ಒಬ್ಬ ವ್ಯಕ್ತಿಯಾದರೂ ಸರಿ ಅವನು ಈ ದಿನವನ್ನು ಸ್ವಲ್ಪವಾದರೂ ನೆಮ್ಮದಿಯಿಂದ ಕಳೆಯುವಂತೆ ಮಾಡಬೇಕೆಂದು ನನಗನಿಸಿತು. ಬಡಜನರು ತಮ್ಮ ಜೀವನ ನಿರ್ವಹಣೆಗಾಗಿ ಬಹು ಸಣ್ಣ ಮೊತ್ತದ ಹಣದ ಹುಡುಕಾಟಕ್ಕಾಗಿ ನಡೆಸುತ್ತಿದ್ದ ಹೋರಾಟದ ಸಮ್ಮುಖದಲ್ಲಿ ನಿಲ್ಲುವಂತೆ ಆ ಅನಿಸಿಕೆ ಮಾಡಿತು. ಹಳ್ಳಿಯಲ್ಲಿಯ ಒಬ್ಬ ಹೆಂಗಸು ಒಂದು ಡಾಲರಿಗಿಂತಲೂ ಕಡಿಮೆ ಮೊತ್ತದ ಹಣವನ್ನು ಓರ್ವ ಸಾಲಗಾರನಿಂದ ಪಡೆದಿದ್ದಳು. ಆ ಸಾಲಗಾರ ಅವಳೊಂದಿಗೆ ಮಾಡಿಕೊಂಡಿದ್ದ ಕರಾರನ್ನು ತಿಳಿದು ನನಗೆ ಆಘಾತವಾಯಿತು. ಆ ಹೆಂಗಸು ತಯಾರಿಸುವ ಎಲ್ಲ ಉತ್ಪಾದನೆಯನ್ನು ತನಗೇ ತಂದುಕೊಡಬೇಕು, ಆ ಉತ್ಪಾದನೆಗಳ ಮೇಲೆ ತನ್ನದೇ ಹಕ್ಕು ಉಂಟೆಂದು ಆತ ಅವಳಿಗೆ ತಿಳಿಸಿದ್ದ. ಇದು ಶ್ರಮ ಮಾಡುವ ಗುಲಾಮನ ಖರೀದಿಯೆಂದೇ ನನಗನಿಸಿತು. ನಮ್ಮ ಕಾಲೇಜಿನ ಹತ್ತಿರವಿದ್ದ ಹಳ್ಳಿಯಲ್ಲಿ ಈ ಸಾಲದ ವ್ಯವಹಾರಕ್ಕೆ ತುತ್ತಾಗಿರುವವರ ಪಟ್ಟಿಯನ್ನು ತಯಾರಿಸಲು ನಿಶ್ಚಯಿಸಿದೆ. ಪಟ್ಟಿ ತಯಾರಾಯಿತು. ಅದರಲ್ಲಿ ಸಾಲಕ್ಕೆ ತುತ್ತಾದವರ ನಲ್ವತ್ತೆರಡು ಜನ ಮಹಿಳೆಯರ ಹೆಸರು ಇದ್ದವು. ಅವರು ಪಡೆದ ಸಾಲದ ಮೊತ್ತ ಇಪ್ಪತ್ತೇಳು ಡಾಲರ್‌ನಷ್ಟಿತ್ತು. ನಾನೇ ನನ್ನ ಕೈಯಿಂದ ೨೭ ಡಾಲರನ್ನು ಕೊಟ್ಟು ಅವರನ್ನು ಸಾಲಗಾರರಿಂದ ಮುಕ್ತ ಮಾಡಿದೆ. ನನ್ನ ಈ ಒಂದು ಸಣ್ಣ ಕೃತ್ಯ ಜನರಲ್ಲಿ ಉಂಟುಮಾಡಿದ ಸಂಚಲನ ನಾನು ಈ ಕೆಲಸದಲ್ಲಿ ಮುಂದುವರಿಯುವಂತೆ ಮಾಡಿತು. ಸಣ್ಣ ಮೊತ್ತದಿಂದ ಅಷ್ಟೊಂದು ಜನರನ್ನು ಸಂತೋಷಗೊಳಿಸಬಲ್ಲೆನಾದರೆ, ಇನ್ನೂ ಹೆಚ್ಚು ಆ ರೀತಿ ಏಕೆ ಮಾಡಬಾರದು?

ಅಂದಿನಿಂದ ನಾನು ಅದನ್ನೇ ಮಾಡಲು ಪ್ರಯತ್ನಿಸುತ್ತಿದ್ದೇನೆ. ನಮ್ಮ ಆವರಣದಲ್ಲಿದ್ದ ಬ್ಯಾಂಕ್ ಬಡವರಿಗೆ ಸಾಲ ಕೊಡುವಂತೆ ಅದರ ಮನವೊಲಿಸುವುದು ನನ್ನ ಮೊದಲ ಕೆಲಸವಾಯಿತು. ಆದರೆ ಅದು ಸಾಧ್ಯವಾಗಲಿಲ್ಲ. ಬಡವರು ಸಾಲಕ್ಕೆ

ಅರ್ಹರಲ್ಲವೆಂದು ಹೇಳಿತು. ಅನೇಕ ತಿಂಗಳುಗಳ ನನ್ನ ಪ್ರಯತ್ನ ವಿಫಲವಾದ ಮೇಲೆ ಬಡವರ ಸಾಲಕ್ಕೆ ನಾನು ಜಾಮೀನುದಾರನಾಗುವೆನೆಂದು ಹೇಳಿದೆ. ಇದರ ಫಲಿತಾಂಶದಿಂದ ನಾನು ಮೂಕವಿಸ್ಮಿತನಾದೆ. ಬಡವರು ಪ್ರತಿಸಲವೂ ಹೊತ್ತಿಗೆ ಸರಿಯಾಗಿ ಸಾಲ ಮರುಪಾವತಿಸಿದರು! ಆದರೂ ಕೂಡ ಅಲ್ಲಿದ್ದ ಬ್ಯಾಂಕುಗಳ ಮೂಲಕ ಆ ಕಾರ್ಯಕ್ರಮವನ್ನು ವಿಸ್ತರಿಸುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಬಡವರಿಗಾಗಿಯೇ ಒಂದು ಬ್ಯಾಂಕ್ ಸ್ಥಾಪಿಸಿಲು ತೀರ್ಮಾನಿಸಿದೆ. ಅಂತೂ ೧೯೮೩ರಲ್ಲಿ ಅಂಥ ಒಂದು ಬ್ಯಾಂಕನ್ನು ಸ್ಥಾಪಿಸುವಲ್ಲಿ ನಾನು ಯಶಸ್ಸು ಪಡೆದೆ. ಆ ಬ್ಯಾಂಕಿಗೆ ಗ್ರಾಮೀಣ ಬ್ಯಾಂಕ್ ಎಂದು ನಾಮಕರಣ ಮಾಡಿದೆ.

ಇಂದು ಗ್ರಾಮೀಣ ಬ್ಯಾಂಕ್ ೭೦ ದಶಲಕ್ಷಕ್ಕೂ ಹೆಚ್ಚು ಜನರಿಗೆ ಸಾಲ ಕೊಡುತ್ತದೆ. ಅದರಲ್ಲಿ ಶೇಕಡಾ ೯೭ ಜನ ಮಹಿಳೆಯರಿದ್ದಾರೆ. ಅವರು ಬಂಗ್ಲಾದೇಶದ ೭೩೦೦೦ ಹಳ್ಳಿಗಳಲ್ಲಿ ವಾಸವಾಗಿರುವಂಥವರಾಗಿದ್ದಾರೆ. ಆದಾಯ ಹೆಚ್ಚಿಸುವ ಉದ್ಯೋಗಕ್ಕೆ ಸಾಲ, ಗೃಹ ನಿರ್ಮಾಣ ಸಾಲ, ವಿದ್ಯಾರ್ಥಿಗಳಿಗೆ ಸಾಲ, ಇತ್ಯಾದಿ ಇನ್ನೂ ಹಲವಾರು ಬಗೆಯ ಸಾಲಗಳನ್ನು ಈ ಬ್ಯಾಂಕ್ ಬಡಕುಟುಂಬಗಳಿಗೆ ಕೊಡುತ್ತದೆ. ೧೯೮೪ರಲ್ಲಿ ಗೃಹನಿರ್ಮಾಣದ ಸಾಲದ ಯೋಜನೆ ಪ್ರಾರಂಭವಾದ ಮೇಲೆ ೬೪೦,೦೦೦ ಮನೆಗಳನ್ನು ಕಟ್ಟಲು ಸಾಲವನ್ನು ಉಪಯೋಗಿಸಿಕೊಳ್ಳಲಾಗಿದೆ. ಈ ಮನೆಗಳ ಕಾನೂನು ಬದ್ಧ ಒಡೆತನ ಮಹಿಳೆಯರದಾಗಿದೆ. ಕುಟುಂಬಕ್ಕೆ ಹೆಚ್ಚಿನ ಲಾಭ ಮಹಿಳೆಯರಿಗೆ ಸಾಲ ಕೊಡುವುದರಿಂದ ಲಭಿಸುತ್ತದೆ ಎಂದು ಗೊತ್ತಾದುದರಿಂದ ನಾವು ಮಹಿಳೆಯರನ್ನೇ ಕೇಂದ್ರ ಬಿಂದುವಾಗಿಟ್ಟುಕೊಂಡೆವು. ಬ್ಯಾಂಕಿನ ಸ್ಥಾಪನೆಯಾದಾಗಿನಿಂದ ೬೦ ಬಿಲಿಯನ್ ಡಾಲರ್‌ನಷ್ಟು ಹಣವನ್ನು ಸಾಲವಾಗಿ ಕೊಡಲಾಗಿದೆ. ಮರು ಪಾವತಿಯ ಪ್ರಮಾಣ ಶೇಕಡಾ ೯೯ರಷ್ಟು ಇದೆ. ಗ್ರಾಮೀಣ ಬ್ಯಾಂಕು ನಿಯಮಿತವಾಗಿ ಲಾಭ ಮಾಡುತ್ತದೆ. ಆರ್ಥಿಕವಾಗಿ ಅದು ಸ್ವಾವಲಂಬಿತವಾಗಿದೆ. ೧೯೯೫ರಿಂದಲೂ ಯಾವುದೇ ದಾನಿಗಳಿಂದ ಧನ ಸಹಾಯ ಪಡೆದಿಲ್ಲ. ಆ ಬ್ಯಾಂಕ್ ಕೊಟ್ಟಿರುವ ಸಾಲದಲ್ಲಿ ಬಾಕಿ ಉಳಿದಿರುವ ಸಾಲಕ್ಕೆ ಹೋಲಿಸಿದರೆ ಶೇಕಡಾ ೧೪೩ರಷ್ಟು ಈಗ ಬ್ಯಾಂಕಿನ ಠೇವಣಿಗಳು ಮತ್ತು ಅದರ ಸ್ವಂತ ಸಂಪನ್ಮೂಲಗಳಿವೆ. ಗ್ರಾಮೀಣ ಬ್ಯಾಂಕ್ ಒಂದು ಸಣ್ಣ ಪ್ರಮಾಣದಲ್ಲಿ ನನ್ನ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಹಾಯದಿಂದ ಜನ್ಮತಾಳಿತು. ಇವರಲ್ಲಿ ಮೂವರು ವಿದ್ಯಾರ್ಥಿಗಳು ಇಂದಿಗೂ ನನ್ನೊಂದಿಗೆ ಗ್ರಾಮೀಣ ಬ್ಯಾಂಕ್‌ನಲ್ಲಿದ್ದಾರೆ. ಅವರೆಲ್ಲರೂ ಉನ್ನತ ಕಾರ್ಯಾಧಿಕಾರಿಗಳಾಗಿದ್ದರು. ಇಂದು ನೀವು ಕೊಡಲಿರುವ ಗೌರವವನ್ನು ಸ್ವೀಕರಿಸಲು ಬಂದಿದ್ದಾರೆ.

ಬಾಂಗ್ಲಾದೇಶದ ಜೊಬ್ರಾಯೆಂಬ ಪುಟ್ಟಗ್ರಾಮದಲ್ಲಿ ಜನ್ಮತಾಳಿದ ಈ ವಿಚಾರ ಇಂದು ಜಗತ್ತಿನಾದ್ಯಂತ ಪಸರಿಸಿದೆ. ಗ್ರಾಮೀಣ ರೀತಿಯ ಕಾರ್ಯಕ್ರಮಗಳು ಪ್ರತಿಯೊಂದು ದೇಶದಲ್ಲಿ ಇವೆ. (ಮುಂದುವರಿಯುವುದು....)

(ಅನು : ಸುಕೌ)

* * *

ಪುಸ್ತಕ ಪರಿಚಯ

ಪುಸ್ತಕದ ಹೆಸರು : **ಗಾಂಧೀ ತತ್ವ ಚಿಂತನೆ**
ಲೇಖಕರ ಹೆಸರು : ನೀಲತ್ತಹಳ್ಳಿ ಕಸ್ತೂರಿ
ಪ್ರಕಾಶಕರು : ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ
ಬೆಲೆ ರೂ : ೬೦ ಪುಟಗಳು : ೯೮

ಗಾಂಧೀಯವರನ್ನು ಕುರಿತ ಸಾಹಿತ್ಯ ಸಮುದ್ರದಂತೆ. ಅದರ ಗರ್ಭದಲ್ಲಿ ಅನೇಕ ರತ್ನಗಳಿವೆ. ಅವುಗಳನ್ನು ಹೊರಗೆ ತೆಗೆದುಕೊಂಡು ಬರುವುದು ತುಂಬ ಕಷ್ಟಕರ ಕೆಲಸ. ಆದಾಗ್ಯೂ ಆಗಾಗ್ಗೆ ಕೆಲವು ಮಹನೀಯರು ಈ ಸಮುದ್ರದ ಆಳದಲ್ಲಿ ಮುಳುಗಿ ರತ್ನಗಳನ್ನು ಹೊರಗೆ ತಂದು ಸಮಾಜಕ್ಕೆ ಅರ್ಪಿಸುವ ಕೆಲಸ ಮಾಡಿದ್ದಾರೆ. ಒಂದೊಂದು ರತ್ನವೂ ಜೀವನಕ್ಕೆ ಸಂಬಂಧಿಸಿದ ಮೌಲ್ಯವಾಗಿರುತ್ತದೆ. ಆ ಮೌಲ್ಯಗಳನ್ನು ತಿಳಿಯುವುದೇ ಒಂದು ಆನಂದ, ಒಂದು ಶಕ್ತಿ. ಇಂಥ ಪ್ರಯತ್ನದ ಅಂಗವಾಗಿ ಇತ್ತೀಚೆಗೆ ಹೊರ ಬಂದಿರುವ ಗಾಂಧೀವಿಚಾರದ ಒಂದು ರತ್ನ **"ಗಾಂಧೀ ತತ್ವ ಚಿಂತನೆ"** ಈ ಪುಸ್ತಕದಲ್ಲಿ ನೀಲತ್ತಹಳ್ಳಿಯವರು ತಮ್ಮ ಎಂದಿನ ವಿಶಿಷ್ಟ ಭಾಷಾ ಶೈಲಿಯಲ್ಲಿ ಇಪ್ಪತ್ತೆರಡು ಅಧ್ಯಾಯಗಳಲ್ಲಿ ಗಾಂಧೀಯವರ ಮುಖ್ಯವಾದ ವಿಚಾರಗಳನ್ನು ಗಾಂಧೀವಿಚಾರದ ಆಸಕ್ತರಿಗೆ ಒದಗಿಸಿ ಕೊಟ್ಟಿದ್ದಾರೆ. ಗಾಂಧೀಯವರಿಗೆ ಪ್ರಿಯವಾದ ಸತ್ಯದಿಂದ ಪ್ರಾರಂಭಿಸಿ ಅವರು ಪ್ರತಿಪಾದಿಸಿದ ಏಕಾದಶ ವ್ರತಗಳವರೆಗೆ ಗಾಂಧೀವಿಚಾರಗಳ ಹರುವಿನ ಪರಿಚಯವಿದೆ. ಹೊಸದಾಗಿ ಗಾಂಧೀವಿಚಾರವನ್ನು ತಿಳಿದು ಕೊಳ್ಳಲು ಹಂಬಲಿಸುವರಿಗೆ ಈ ಪುಸ್ತಕ ದಾರಿ ದೀಪವಾಗಿದೆ.

* * *

ಅಭಿನಂದನೆಗಳು

ಸಂಗೀತ ರತ್ನ ಶ್ರೀ ಭೀಮಸೇನ್ ಜೋಷಿಯವರಿಗೆ
ರಾಷ್ಟ್ರದ ಅತ್ಯುನ್ನತ ಗೌರವ ಪ್ರಶಸ್ತಿ ಭಾರತರತ್ನ
ಪದವಿ ದೊರೆತದಕ್ಕಾಗಿ ಜನಪದ ವಿಚಾರ ಅವರನ್ನು
ಅಭಿನಂದಿಸುತ್ತದೆ. ಶ್ರೀ ಜೋಷಿಯವರಿಗೆ ದೊರೆತ ಈ ಪ್ರಶಸ್ತಿಯಿಂದ
ಕನ್ನಡಿಗರೆಲ್ಲರು ಹೆಮ್ಮೆಪಡುವಂತಾಗಿದೆ.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಟ್ರಸ್ಟಿನ ಕಾರ್ಯಕಾರಿ ಸಮಿತಿ ಸಭೆಯು ಇತ್ತೀಚೆಗೆ ನಡೆಯಿತು. ಕರುಣಾಗೃಹ ಮತ್ತು ಹೊಸ ಜೀವನ ದಾರಿ ಕೆಂದ್ರದಲ್ಲಿ ಕೈಗೊಳ್ಳಲಾದ ರಿಪೇರಿ ಕೆಲಸ ಹಾಗೂ ಸುಣ್ಣ-ಬಣ್ಣದ ಕೆಲಸದ ಖರ್ಚಿನ ವಿವರಗಳನ್ನು ಕೆಲಸದ ಕಾರ್ಯ ವರದಿಯೊಂದಿಗೆ ಪರಿಶೀಲಿಸಿ ಒಪ್ಪಿಕೊಳ್ಳಲಾಯಿತು. ಕರುಣಾಗೃಹದ ಹಾಗೂ ಹೊಸ ಜೀವನ ದಾರಿಯ ಅಭಿವೃದ್ಧಿಯ ಬಗ್ಗೆ ಕೆಲ ಮಹತ್ವದ ತೀರ್ಮಾನ ಕೈಗೊಳ್ಳಲಾಯಿತು. ಆ ತೀರ್ಮಾನಗಳನ್ನು ಮುಂದಿನ ಕೆಲವು ತಿಂಗಳುಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು. ಇತ್ತೀಚೆಗೆ ಮಂಡ್ಯದ ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದವರು ತಮ್ಮ ಸುಮಾರು ಎಪ್ಪತ್ತು ಜನ ಸದಸ್ಯರೊಂದಿಗೆ ಬಂದು ಧ್ಯಾನ ಹಾಗೂ ಭಜನಾ ಕಾರ್ಯಕ್ರಮ ನಡೆಸಿದರು. ಒಂದು ದಿನ ಪೂರ್ತಿ ಟ್ರಸ್ಟಿನಲ್ಲಿ ತಮ್ಮ ಸಮಯ ಕಳೆದರು. ಮೇಲುಕೋಟೆಯಲ್ಲಿರುವ ಪಿ.ಯು.ಸಿ. ಕಾಲೇಜಿನ ಆಶ್ರಯದಲ್ಲಿ ಮಂಡ್ಯ ಜಿಲ್ಲಾ ಇತಿಹಾಸ ಉಪನ್ಯಸಕರ ಒಂದು ದಿನದ ಶಿಬಿರ ಟ್ರಸ್ಟಿನ ಆವರಣದಲ್ಲಿ ನಡೆಯಿತು. ಸುಮಾರು ಎಂಭತ್ತು ಜನ ಇತಿಹಾಸ ಉಪನ್ಯಾಸಕರು ಈ ಶಿಬಿರದಲ್ಲಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಅವರು ಖಾದಿ ಭಂಡಾರಕ್ಕೂ ಭೇಟಿ ಕೊಟ್ಟು ತಮಗೆ ಬೇಕಾದ ಪುಸ್ತಕ ಮತ್ತು ಬಟ್ಟೆಯನ್ನು ಖರೀದಿಸಿದರು. ನೃತ್ಯ ತರಗತಿ, ಹಿರಿಯ ನಾಗರಿಕರ ಮಂಗಳವಾರದ ಸಭೆ ಮತ್ತು ಸರ್ವೋದಯ ಪಾತ್ರೆಯ ಧಾನ್ಯ ಹಂಚುವಿಕೆ ಇತ್ಯಾದಿ ಕಾರ್ಯಕ್ರಮ ನಡೆದವು. ಜನಪದ ಸೇವಾ ಟ್ರಸ್ಟಿನ ಒಂದು ವೆಬ್‌ಸೈಟ್‌ನ್ನು ಕೂಡ ಪ್ರಾರಂಭಿಸಲಾಗಿದೆ ಅದರ ವಿವರ ಈ ರೀತಿ ಇದೆ. www.janapada.net ಟ್ರಸ್ಟಿನ ಅಭಿಮಾನಿಗಳು ಮತ್ತು ಸ್ನೇಹಿತರು ಈ ವೆಬ್‌ಸೈಟಿಗೆ ಆಗಾಗ್ಗೆ ಭೇಟಿ ಕೊಟ್ಟು ಟ್ರಸ್ಟಿನ ಕಾರ್ಯಕ್ರಮಗಳನ್ನು ತಿಳಿದುಕೊಳ್ಳಬೇಕಾಗಿ ವಿನಂತಿ.


೨೦೦೮ ನವೆಂಬರ್ ಮಾಹೆಯ ದಾನಿಗಳು

ಡಾ.ರಾಮಚಂದ್ರ ; ರಾಷ್ಟ್ರೋತ್ಥಾನ ಬಳಗ - ಮಂಡ್ಯ
ಶ್ರೀ ವಸಂತರಾವ್ ತಾಳಿಕೋಟೆ ; ಶ್ರೀ ಎಸ್.ಅಮರ್ ; ಶ್ರೀ ಬಾಪು ಸತ್ಯನಾರಾಯಣ
ಶ್ರೀ ಬಿ.ಎಸ್.ನಾರಾಯಣ ಸ್ವಾಮಿ ; ಶ್ರೀ ಎಂ.ಎನ್.ಶಶಿಧರ್ - ಬೆಂಗಳೂರು
ಶ್ರೀ ಕೃಷ್ಣಸ್ವಾಮಿ - ಬಿಜಾಪುರ : ಶ್ರೀಮತಿ ನಳಿನಿ ಭುಜಂಗ್ - ನವದೆಹಲಿ
ಮತ್ತು ಸಂಸ್ಥೆಯ ಎಲ್ಲಾ ಮಾಹೆಯಾನ ದಾನಿಗಳು

* * *

ಜನಪದ ನಿಲಯದ ಅಂತರಂಗದಲ್ಲಿ.. ೭೧

⊙ *ಸುರೇಂದ್ರ ಕೌಲಗಿ*



ನಿಲಯದ ಅಂತರಂಗದಲ್ಲಿಯ ಮಾತುಗಳಲ್ಲಿ ಕೌಟುಂಬಿಕ ವಿಷಯಗಳನ್ನು ತರಬಾರದೆಂದು ಪ್ರಯತ್ನಿಸಿದರೂ ಅದು ಸಾಧ್ಯವಿಲ್ಲವಾಗಿದೆ. ಏಕೆಂದರೆ ಈಗಾಗಲೇ ಹಲವಾರು ಸಲ ಅಂತರಂಗದಲ್ಲಿಯ ಮಾತುಗಳಲ್ಲಿ ಪ್ರಸ್ತಾಪಿಸಿರುವಂತೆ ಟ್ರಸ್ಟ್ ಪ್ರಾರಂಭವಾದದ್ದು ಕುಟುಂಬವನ್ನು ಆಧಾರವಾಗಿಟ್ಟುಕೊಂಡೇ. ಮುಂದೆ ಟ್ರಸ್ಟ್ ಬೆಳೆದಂತೆಲ್ಲ ಕುಟುಂಬವೂ ಬೆಳೆಯುತ್ತ ಬಂತು. ಟ್ರಸ್ಟಿನ ಕಾರ್ಯಕ್ರಮಗಳು ಟಿಸಿಲು ಒಡೆಯುತ್ತ ಹೋದಂತೆ, ಕುಟುಂಬದ ಮುಂದಿನ ತಲೆಮಾರಿನವರೂ ಅವುಗಳಲ್ಲಿ ಭಾಗವಹಿಸುತ್ತ ಬಂದರು. ಟ್ರಸ್ಟಿನ ಸ್ಥಾಪನೆಯಾದಾಗಿನಿಂದ ಇದುವರೆಗೂ ಐದು ದಶಕಗಳ ಕಾಲದುದ್ದಕ್ಕೂ ಟ್ರಸ್ಟಿನ ಅವಿಭಾಜ್ಯ ಅಂಗವಾಗಿರುವ ಗಿರಿಜಮ್ಮನವರ ಬಗ್ಗೆ ಪ್ರಸ್ತಾಪಿಸದೇ ಇರಲು ಹೇಗೆ ಸಾಧ್ಯ? ಮೊದಲು ಪತ್ನಿಯಾಗಿ, ನಂತರ ಧರ್ಮದರ್ಶಿನಿಯಾಗಿ, ಅನಂತರ ಗೃಹಿಣಿಯಾಗಿ ಅಹರ್ನಿಶಿ ವಿವಿಧ ಬಗೆಯಲ್ಲಿ ಟ್ರಸ್ಟಿಗಾಗಿ ದುಡಿದ ಗಿರಿಜಮ್ಮನವರನ್ನು ಸ್ಮರಿಸದೆ ಅಂತರಂಗದ ಮಾತನ್ನು ಹೇಗೆ ಹೇಳುವುದೆಂಬ ಪ್ರಶ್ನೆಯನ್ನು ಮೊದಲು ಮಂಡಿಸಿದ್ದೇನೆ. ಟ್ರಸ್ಟ್‌ನ್ನು ನಿಕಟವಾಗಿ ಬಲ್ಲ ಅಸಂಖ್ಯ ದಾನಿಗಳಿಗೆ, ಅಸಂಖ್ಯ ಅತಿಥಿಗಳಿಗೆ, ಟ್ರಸ್ಟಿನಲ್ಲಿ ಬೆಳೆದು ದೊಡ್ಡವರಾಗಿ ಹೊರಗೆ ಹೋದ ಅಸಂಖ್ಯ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಈ ಮಾತಿನಲ್ಲಿ ಯಾವ ಉತ್ಪ್ರೇಕ್ಷೆಯಾಗಲೀ, ಸತ್ಯವಿದೂರವಾದ ಅಂಶವಾಗಲೀ ಕಾಣಬರಲಾರದು. ಆದ್ದರಿಂದ ಗಿರಿಜಮ್ಮನವರ ಬಗ್ಗೆ ಬರೆಯುವ ಮುನ್ನ ಇದ್ದ ಸಂಕೋಚದ ಆವರಣದಿಂದ ಹೊರಬಂದು ಅವರ ಬಗ್ಗೆ ಈಸಲ ಕೆಲವು ಮಾತುಗಳನ್ನು ಪ್ರಸ್ತಾಪಿಸಲಾಗಿದೆ. ಗಿರಿಜಮ್ಮನವರು ಸರಳತೆಗೆ ನಿರಾಡಂಬರಕ್ಕೆ ಮತ್ತೊಂದು ಹೆಸರು. ಮದುವೆಯ ಸಂದರ್ಭದಲ್ಲಿ ನೆಪಮಾತ್ರಕ್ಕೆ ಎರಡು ಚಿನ್ನದ ಬಳೆಗಳನ್ನು ಒಂದು ಒಳ್ಳೆ ಸೀರೆಯನ್ನು ಉಪಯೋಗಿಸಿದ್ದನ್ನು ಬಿಟ್ಟರೆ ಆನಂತರದಿಂದ ಈ ದಿನದ ವರೆಗೂ ಆ ಸರಳ ಜೀವನವನ್ನೇ ಪಾಲಿಸಿಕೊಂಡು ಬಂದಿದ್ದಾರೆ. ಕುಟುಂಬಕ್ಕೆ ಸ್ವಂತ ಆದಾಯವಿಲ್ಲದೆ ಜೀವನ ನಿರ್ವಹಣೆಗಾಗಿ ಟ್ರಸ್ಟಿನ ಆಶ್ರಯ ಪಡೆದುದರ ಇತಿಮಿತಿಗಳನ್ನು ಚೆನ್ನಾಗಿ ಬಲ್ಲ ಅವರು ಹಾಸಿಗೆ ಇದ್ದಷ್ಟು ಕಾಲು

ಚಾಚುವ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದವರಾಗಿದ್ದಾರೆ. ಅವರ ಸರಳತೆಗೆ ಮೆರಗನ್ನು ತಂದು ಕೊಡುವ ಇನ್ನೊಂದು ಗುಣ ಪ್ರಾಮಾಣಿಕತೆ. ಜೀವನದಲ್ಲಿಯ ಅವರ ಸರಳತೆ ಮತ್ತು ಪ್ರಾಮಾಣಿಕತೆ ಟ್ರಸ್ಟ್‌ನ್ನು ದಶಕಗಳಿಂದಲೂ ಕಾಪಾಡುತ್ತಾಬಂದಿದೆ. ಆ ಗುಣಗಳು ಎಂದೂ ಪ್ರದರ್ಶಿತಗೊಂಡಿಲ್ಲ. ಬದಲಿಗೆ ಪ್ರತ್ಯಕ್ಷ ಆಚರಣೆಯಲ್ಲಿ ಅರಳುತ್ತಾ ಬಂದಿವೆ. ಟ್ರಸ್ಟಿನ ಧರ್ಮದರ್ಶಿಯಾಗಿ ಆಡಳಿತದಲ್ಲಿಯ ಅವರ ಪಾತ್ರವು ಅಷ್ಟೇ ವಿಚಕ್ಷಣೆಯಿಂದ ಕೂಡಿದುದಾಗಿದೆ. ಯಾವುದೇ ತೀರ್ಮಾನವಿರಲಿ, ಕಾರ್ಯಕ್ರಮವಿರಲಿ ಅದನ್ನು ವ್ಯವಹಾರದ ಒರೆಗಲ್ಲಿಗೆ ಉಜ್ಜಿನೋಡಿ ನಂತರ ತಮ್ಮ ಅಭಿಪ್ರಾಯ ಕೊಡುವಂಥ ಕ್ರಮ ಓರ್ವ ಉನ್ನತ ಆಡಳಿತಗಾರನ ರೀತಿಯಂಥದು. ಒಮ್ಮೆ ತಮ್ಮ ಅಭಿಪ್ರಾಯ ಕೊಟ್ಟರೆ ಅದರ ಬಗ್ಗೆ ಮರುಚಿಂತನೆ ಇಲ್ಲ. ಅಷ್ಟು ಆತ್ಮವಿಶ್ವಾಸ ಅವರದು. ಎಲ್ಲವನ್ನು ಅಳೆದು-ತೂಗಿ-ಪರೀಕ್ಷಿಸಿ ನೋಡುವ ಸ್ವಭಾವದ ಅವರ ಬಗ್ಗೆ ಭಯಭೀತಿಯೊಂದಡಗೂಡಿದ ಗೌರವ ಭಾವನೆ ಎಲ್ಲರಲ್ಲಿ ಉಂಟಾಗುತ್ತದೆ. ಬಂದವರನ್ನು ಊಟೋಪಚಾರದಿಂದ ಸಂತೋಷ ಪಡಿಸುವುದರಲ್ಲಿಯೇ ತಾವೂ ಸಂತೋಷ ಪಡುವ ಸ್ವಭಾವ ಅವರದು. ತಮ್ಮ ಹಸಿವೆ, ಸೌಕರ್ಯ ಮುಂತಾದವುಗಳನ್ನು ಗಮನಿಸದೆ ಬೇರೆಯವರ ಸೇವೆ ಮಾಡುವುದು ಅವರಿಗೆ ಅವರ ತಾಯಿಯಿಂದ ಬಂದ ಗುಣ. ಶಿಶುವಿಹಾರದ ಅಧ್ಯಾಪಕಿಯಾಗಿದ್ದಾಗ ಮಕ್ಕಳ ಆಟಕ್ಕೆ, ಸೌಕರ್ಯಗಳಿಲ್ಲದಿದ್ದರೂ ಸುತ್ತಲೂ ಸಾಮಾನ್ಯವಾಗಿ ದೊರೆಯುವ ಪರಿಕರಗಳನ್ನೇ ಉಪಯೋಗಿಸಿ, ಶಿಶುಗೀತೆಗಳು, ಶಿಶುಕಥೆಗಳನ್ನು ಅಭಿನಯದ ಮೂಲಕ ಮಕ್ಕಳನ್ನು ರಂಜಿಸಿ ಗಿಡದ ನೆರಳಿನಲ್ಲಿ ಪಾಠ ಮಾಡಿದ ಸಾಮರ್ಥ್ಯ ಅವರದು. ಆ ಚಾಣಾಕ್ಷ ಬುದ್ಧಿಯೇ ಇಂದಿನ ಟ್ರಸ್ಟ್ ವ್ಯವಹಾರದಲ್ಲೂ ಇದೆ. ಜ್ಞಾಪಕ ಶಕ್ತಿ ಅವರಿಗೆ ದೇವರಿಂದ ಬಂದ ಕೊಡುಗೆ. ಹಣಕಾಸಿನ ಬಹಳಷ್ಟು ವ್ಯವಹಾರವನ್ನು ನೆನಪಿನಲ್ಲಿಟ್ಟು ವ್ಯವಹಾರ ಮಾಡುವ ಧೈರ್ಯ ಅವರದು. ಗಂಡನನ್ನೂ, ಮಕ್ಕಳನ್ನೂ, ಸೊಸೆಯಂದಿರನ್ನೂ, ಮೊಮ್ಮಕ್ಕಳನ್ನೂ ಹಾಗೂ ಸಂಸ್ಥೆಯ ಮಕ್ಕಳನ್ನೂ ಒಳಗೊಂಡಿರುವ ದೊಡ್ಡ ಸಂಸಾರದ ಮಾತೆಯಾಗಿ, ಮಾರ್ಗದರ್ಶಿಯಾಗಿ, ಹಿತಚಿಂತಕಳಾಗಿ ಟ್ರಸ್ಟ್‌ನ್ನು ಒಳಗೊಂಡಂತೆ ವಿಶಾಲ ಕುಟುಂಬದ ಆಧಾರ ಸ್ತಂಭವಾಗಿ ಇದ್ದುಕೊಂಡು ತಮ್ಮ ಎಪ್ಪತ್ತೆರಡನೇ ವಯಸ್ಸಿನಲ್ಲೂ ಉತ್ಸಾಹದಿಂದ ಕೆಲಸ ಮಾಡಿಕೊಂಡಿದ್ದಾರೆ. ಈ ಎಲ್ಲಾ ಗುಣಗಳಿಗೆ ಕಳಸ ಪ್ರಾಯವಾಗಿರುವುದು ಅವರ ಪಾಕಶಾಸ್ತ್ರ ಕಲೆ. ಅವರ ಕೈಯಿಂದ ತಯಾರಾದ ಸಾರಿಗೆ ಎಂದೂ ಹಳಸು ಎಂಬುದಿಲ್ಲ.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

೧. ಶ್ರೀ ಕೆ.ಎಂ. ಶಾಂತವೀರಯ್ಯ, ಬೆಂಗಳೂರು

೨. ಡಾ. ಸಿ.ಜಿ. ಉಷಾದೇವಿ, ಮೈಸೂರು

೩. ಪ್ರೊ. ಎಚ್.ಎಲ್. ಕೇಶವಮೂರ್ತಿ, ಮಂಡ್ಯ

೪. ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ ಮಾನ್ಯ

೧. ಡಾ. ಎಸ್. ಸುಧಾಕರ ನಾಯಕ್, ಮಣಿಪಾಲ

೨. ಡಾ. ಎಸ್.ವಿ. ನರಸಿಂಹನ್, ವಿರಾಜಪೇಟೆ

೩. ಶ್ರೀ ಕೆ.ಎಸ್. ಅಮರ್, ಬೆಂಗಳೂರು

೪. ಶ್ರೀ ಎಸ್.ಎನ್. ಶ್ರೀಧರಮೂರ್ತಿ, ದಾವಣಗೆರೆ

ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

KA / SK / MND / 470 / 2006-2008
Regd. no. KAR / KAN / 2000 / 3820

ತೆರದ-ಅಂಚೆ



ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.Phone : 08236 – 299854, 316344
e-mail : janapada@yahoo.com Printed at Sanketh Mudrana, Melkote.